
ಸಂಚಿಕೆ
೧೧
ಜುಲೈ, ೨೦೧೭

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



Karnataka Cultural Organization – Brindavana (KCOB) 501(C)(3), NJ

Copyright © KCO – Brindavana

ಸಂಚಿಕೆ
೧೧
ಜುಲೈ, ೨೦೧೭

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ಈ ಸಂಚಿಕೆಯಲ್ಲಿ....


| | | | |
|---|---|---|---|
| ಸಂಪಾದಕೀಯ | ಪು ೧ | ಹಿನ್ನೋಟ | ಪು ೩-೪ |
| ಅಭಿಮಾನಿ ತಂಡದ ನುಡಿ | ಪು ೨ | ಸಂವಾದ | ಪು ೫ |
| ಸಿದ್ಧಗಂಗೆಯ ಸಿದ್ಧಪುರುಷ | ಪು ೬-೭ | ಕಥಾ ಸಮಯ | ಪು ೮-೯ |
| ಕಾಲೇಜು ದಿನಗಳ ನೆನಪು | ಪು ೧೦ | ಯುವವಾಣಿ | ಪು ೧೧ |
| ಪುಸ್ತಕ ವಿಮರ್ಶೆ | ಪು ೧೨ | ಅಮೇರಿಕಾದ ಅನುಭವ | ಪು ೧೩ |
| ಸಾಹಿತ್ಯ ಬೃಂದಾವನ | ಪು ೧೪ | ಓದುಗರ ಓಲೆಗಳು | ಪು ೧೫ |




ಸತ್ಯ ಪ್ರಸಾದ್
ಪ್ರಧಾನ ಸಂಪಾದಕರು



ರಾಘವೇಂದ್ರ ಕುಂದಲಗುರ್ಕಿ
ಸಂಪಾದಕರು



ಕಾವ್ಯಾ ಕಡಮ ನಾಗರಕಟ್ಟೆ
ಸಂಪಾದಕ ವರ್ಗ



ಭಾಸ್ಕರ ತೈಲಗೇರಿ
ಸಂಪಾದಕ ವರ್ಗ



ಅನಿಲ್ ಭಾರಧ್ವಾಜ
ಸಂಪಾದಕ ವರ್ಗ



ಪ್ರಶಾಂತ ಎಂ.
ಸಂಪಾದಕ ವರ್ಗ



ಅಮೂಲ್ಯ ಕಟ್ಟೀಮನಿ
ಸಂಪಾದಕ ವರ್ಗ

ಮುಖಪುಟ ಚಿತ್ರ:
ಜಗನ್ನಾಥ ವಿಗ್ರಹ
ಸೋಮನಾಥಪುರ

ಸಂಪಾದಕೀಯ ಪುಟ ಚಿತ್ರ:
ಕೇಶವ ದೇವಸ್ಥಾನ,
ಸೋಮನಾಥಪುರ

ಚಿತ್ರ ಕೃಪೆ : ಅಂತರ್ಜಾಲ

## ಪ್ರಧಾನ ಸಂಪಾದಕರಿಂದ......

**ಬೃಂ**ದಾವನ ಸಾಹಿತ್ಯ ಅಭಿಮಾನಿಗಳಿಗೆ ನಮಸ್ಕಾರಗಳು !!!

ನಿಮ್ಮೊಂದಿಗೆ ಒಂದು ವಿಷಯ ಹಂಚಿಕೊಳ್ಳಲು ತುಂಬಾ ಖುಷಿಯಾಗುತ್ತಿದೆ.

ಬರುವ ಸೆಪ್ಟೆಂಬರ್ ಗೆ ಸರಿಯಾಗಿ ನಮ್ಮ 'ಸಾಹಿತ್ಯ ಬೃಂದಾವನಕ್ಕೆ ಮೂರು ವರ್ಷ ತುಂಬುತ್ತದೆ! ಪುಟ್ಟ ಅಂಬೆಗಾಲಿನಿಂದ ಪ್ರಾರಂಭವಾಗಿ ಈಗ ಸ್ವತಂತ್ರವಾಗಿ ನಡೆದಾಡುವ ಮಗುವಿನ ಮಟ್ಟಕ್ಕೆ ಬೆಳೆದಿದೆ. ಮೂರು ವರ್ಷಗಳಿಂದಲೂ ನಿರಂತರವಾಗಿ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿ ವಿಭಿನ್ನ ಪ್ರಕಾರಗಳಾದ 'ಅಕ್ಷರ ಭಂಡಾರ', 'ಬೃಂದಾವನ ವಾಣಿ', 'ಕವಿಗೋಷ್ಠಿ' ಗಳ ಮೂಲಕ ತಮಗೆಲ್ಲ ಶ್ರೀಮಂತ ಕನ್ನಡ ಸಾಹಿತ್ಯದ ಮೃದು ಸ್ಪರ್ಶವನ್ನು ನೀಡಿದೆ. ಇದನ್ನು ಪೋಷಿಸಿ ಈ ಮಟ್ಟಕ್ಕೆ ಬೆಳೆಸಿ ಎಲೆ-ಮರೆಯ ಕಾಯಿಯಂತೆ ದುಡಿದ ಸಾಹಿತ್ಯ ಬಳಗಕ್ಕೂ ಮತ್ತು ಇದಕ್ಕೆ ಪ್ರೀತಿಯ ಧಾರೆಯೆರೆದ ಅಕ್ಷರ ಪ್ರೇಮಿಗಳಾದ ನಿಮಗೂ ಅಭಿಮಾನಿ ತಂಡದ ಹೃತ್ಪೂರ್ವಕ ವಂದನೆಗಳು.

ಪ್ರತಿ ವರುಷದಂತೆ ಈ ಬಾರಿಯೂ ಸೆಪ್ಟೆಂಬರ್ ನಲ್ಲಿ 'ಬೃಂದಾವನ ಕನ್ನಡ ಸಾಹಿತ್ಯ ಸಮ್ಮೇಳನ' ವನ್ನು ಆಯೋಜಿಸುತ್ತಿದ್ದೇವೆ. ನಾಡಿನ ಹೆಸರಾಂತ ಸಾಹಿತಿಗಳನ್ನು ಮತ್ತು ಪ್ರಸಿದ್ಧ ಅನಿವಾಸಿ ಬರಹಗಾರರನ್ನು ಆಹ್ವಾನಿಸಿ ಉತ್ಕೃಷ್ಟ ಸಾಹಿತ್ಯ ಕಾರ್ಯಕ್ರಮವನ್ನು ನಡೆಸುವುದು ನಮ್ಮ ಆಶಯ. ಇದರ ಸವಿನೆನಪಿಗಾಗಿ ಪ್ರಸಿದ್ಧ ಮತ್ತು ಉದಯೋನ್ಮುಖ ಬರಹಗಾರರಿಂದ ಪ್ರೌಢ ಲೇಖನಗಳನ್ನು ಸ್ವೀಕರಿಸಿ ಉತ್ತಮ ಮಟ್ಟದ ಒಂದು ಪುಸ್ತಕವನ್ನು ಹೊರತಂದರೆ, ಅದು ಕನ್ನಡ ಸಾಹಿತ್ಯಕ್ಕೆ ನಾವು ಮಾಡುವ ಅಳಿಲು ಸೇವೆ ಎಂದು ನಮ್ಮ ಭಾವನೆ. ಇದರ ಮುಂದುವರಿದ ಭಾಗವಾಗಿ ಒಂದು ಸಣ್ಣ ತಂಡವನ್ನು ರೂಪಿಸಿ ಕಾರ್ಯ ಪ್ರವೃತ್ತರಾಗಿದ್ದೇವೆ. ಪುಸ್ತಕಕ್ಕೆ ನಾವು ಆರಿಸಿರುವ ಲೇಖನ ವಸ್ತು:

**"ಬದುಕು ಜಟಕಾ ಬಂಡಿ... "**

ಎಷ್ಟೊಂದು ಅರ್ಥ ಗರ್ಭಿತ ನುಡಿ....ಸುಪ್ರಸಿದ್ಧ ಕವಿ, ದಾರ್ಶನಿಕ ಡಿವಿಜಿ ಯವರು 'ಮಂಕುತಿಮ್ಮನ ಕಗ್ಗ' ಬರೆದದ್ದು ೧೯೪೩ ದಲ್ಲಿ ಅಂದರೆ ಸರಿ ಸುಮಾರು ೭೫ ವರ್ಷಗಳ ಹಿಂದೆ ಆದರೂ ಅವರ ಸಾಲುಗಳು ಇಂದಿಗೂ ಎಷ್ಟು ಪ್ರಸ್ತುತ, ಶ್ರೇಷ್ಠ ಸಾಹಿತ್ಯದ ಗುಣವೇ ಸಾರ್ವಕಾಲಿಕ. (ಎಂದಿನಂತೆಯೇ ನಿಮ್ಮ ಬರಹಕ್ಕೆ ಸ್ವಾಗತವಿದೆ, ಹೆಚ್ಚಿನ ವಿವರಕ್ಕೆ ದಯವಿಟ್ಟು ೧೪ನೇ ಪುಟ ನೋಡಿ).

ಎಂದಿನಂತೆ ಬೃಂದಾವನ ವಾಣಿ ತಂಡ ಅತ್ಯಂತ ಸುಂದರವಾಗಿ ಈ ಸಂಚಿಕೆಯನ್ನು ರೂಪಿಸಿದ್ದಾರೆ ಮತ್ತು ಇದು ನಿಮಗೆ ಇಷ್ಟವಾಗುತ್ತದೆ ಎಂದು ನಂಬಿದ್ದೇನೆ. ದಯಮಾಡಿ ನಿಮ್ಮ ಅನಿಸಿಕೆಗಳನ್ನು/ ಅಭಿಪ್ರಾಯಗಳನ್ನು ತಿಳಿಸಿ, ನಮ್ಮ ತಪ್ಪುಗಳನ್ನು ತಿದ್ದಲು ಸಹಾಯ ಮಾಡಿ.

ಮುಂದಿನ ಸಂಚಿಕೆಯಲ್ಲಿ ಸಿಗೋಣ

*-ಸತ್ಯ*

## ಸಂಪಾದಕರಿಂದ......

**ಆ**ತ್ಮೀಯ ವಿಶ್ವ ಕನ್ನಡಿಗರಿಗೆ ಹಾಗು ನ್ಯೂಜರ್ಸಿಯ ಪ್ರಿಯ ಓದುಗರಿಗೆ ಶುಭಾಶಯಗಳು,

ಅಂತರಂಗದಾ ಮೃದಂಗ ಅಂತು ತೋಮ್ ತನಾನ!
ಚಿತ್ತ ತಾಳ ಬಾರಿಸುತಲಿತ್ತು ಝುಂ ಝಣ ಝಣ!
ನೆನಪು ತಂತಿ ಮೀಟುತಿತ್ತು ತೊಂ ತನನ ತಾನ,
ತೊಂ ತನನ ತಾನ. ತೊಂ ತನನ ತಾನ!!

ವರಕವಿ ಬೇಂದ್ರೆಯವರ ಈ ಒಂದು ಅತ್ಯದ್ಭುತವಾದ ಹಾಡಿನ ಸಾಲುಗಳು, ಹಲವಾರು ಬಾರಿ ನೆನಪಿಗೆ ಬಂದರೂ ಪ್ರತಿ ಸಮಯದಲ್ಲೂ ಹೊಸ ಹೊಸ ವಿಷಯಗಳಿಗೆ ಹೊಸ ಹೊಸ ತರಂಗಗಳ ಆಹ್ಲಾದದ ಅನುಭವ ತರುತ್ತದೆ. ನಮ್ಮ ಅಂತರಂಗದ ಭಾವನೆ ಕಲುಕುವ ಒಂದು ಒಳ್ಳೆಯ ಚಲನಚಿತ್ರ ನೋಡಿದಾಗ, ಒಂದು ಒಳ್ಳೆಯ ಪುಸ್ತಕ ಓದಿದಾಗ, ಒಳ್ಳೆಯ ಸ್ನೇಹಿತ ಬಹಳ ವರ್ಷದ ನಂತರ ಸಿಕ್ಕಾಗ, ಅಂತರಂಗದ ಈ ಮೃದಂಗದ ಝೇಂಕಾರ ಮನದಲ್ಲಿ ಗುನುಗುತ್ತಿರುತ್ತದೆ. ಇಂತಹದೆ ಒಂದು ಅನುಭವ ಮೊನ್ನೆ ಶ್ರೀವತ್ಸ ಜೋಶಿ, ಪ್ರೊಫೆಸರ್ ಕೃಷ್ಣೇಗೌಡರ ಸಂವಾದದಲ್ಲಿ ಸಿಕ್ಕಿತು. ಈ ಅನುಭವ ಅವಿಸ್ಮರಣೀಯ. ಈ ಸಂವಾದ ಕನ್ನಡ ಸಾಹಿತ್ಯ ರಸಿಕರಿಗೆ ಒಂದು ಹಬ್ಬದ ರಸದೌತಣ. ಎಷ್ಟು ತಿಂದರೂ ಮುಗಿಯಲಾರದ ಸಾಹಿತ್ಯದ, ಕನ್ನಡದ ರಸಧಾರೆ.

ಮಕ್ಕಳಿಗೆ ಕನ್ನಡ ಶಾಲೆಯಲ್ಲಿ ಕನ್ನಡ ಕಲಿಸುವುದರ ಜೊತೆಗೆ, ಭಾಷೆಯೊಂದಿಗೆ ಭಾವನಾತ್ಮಕವಾಗಿ ಬೆಸುಗೆ ಹಾಕುವ ಒಂದು ಕಾರ್ಯಕ್ರಮಗಳ ಅವಶ್ಯಕತೆ ಇದೆ ಅಂತ ಎತ್ತಿ ತೋರಿಸಿತು.

ಸ್ವತಂತ್ರ ಭಾರತದ 70 ವರ್ಷಗಳಲ್ಲಿ ಮೊದಲ ಬಾರಿಗೆ ಏಕೀಕೃತವಾದ ತೆರಿಗೆಯ ಮಾದರಿ ಜಾರಿಗೆ ಬಂದಿದೆ. (GST) ವಿವಿಧ ರಾಜ್ಯಗಳ, ರಾಜಕೀಯ ಪಕ್ಷಗಳು ಒಂದುಗೂಡಿ ತಂದ ಈ ತೆರಿಗೆ ಜನಸಾಮಾನ್ಯರಿಗೆ ಉಪಯೋಗವಾಗಲಿ, ಹಲವಾರು ತೆರಿಗೆಗಳಿಂದ ಇದ್ದ ವೈರುಧ್ಯಗಳು ಇದರಿಂದ ಕಮ್ಮಿಯಾದರೂ, ಜನ ಸಾಮಾನ್ಯರ ಪದಾರ್ಥಗಳ ತೆರಿಗೆ ಹೆಚ್ಚಾಗದಂತೆ ಸರಕಾರದ ಗಮನ ಸದಾ ಇರಲಿ. ಇದು ಭಾರತದ ಪ್ರಜಾಪ್ರಭುತ್ವದ ಪ್ರಭುದ್ಧತೆಗೆ ಸಾಕ್ಷಿಯಾಗಿದೆ.

ಭಾರತದ -ಚೀನಾ ಮಧ್ಯ ನಡೆಯುತ್ತಿರುವ ಭೂತಾನ್ ನ ದೋಕ್ಲಮ್ ಪ್ರಸ್ಥಭೂಮಿಯ ವಿವಾದ ಇನ್ನು ಬಗೆ ಹರಿಯುವಂತೆ ಕಾಣುತ್ತಿಲ್ಲ. ಈ ವಿಷಯದಲ್ಲೂ ಭಾರತದ ನಿಲುವಿಗೆ ಎಲ್ಲ ರಾಜಕೀಯ ಪಕ್ಷಗಳು ಕೈ ಜೋಡಿಸಿರುವುದು ಸ್ವಾಗತಾರ್ಹ . ಇದು ಚೀನಾದ ಅಂತಾರಾಷ್ಟ್ರೀಯ ಬೆಳವಣಿಗೆಗೆ ಭಾರತದ ಕಡಿವಾಣ ಅನ್ನ ಬಹುದು.

ಹಲವಾರು ಕಥೆ-ಕವನ,ಲೇಖನಗೊಳಗೊಂಡ ಈ ಸಂಚಿಕೆ ಓದಿ ನಿಮ್ಮ ಅನಿಸಿಕೆಗಳನ್ನು ತಿಳಿಸಿ.

ಮತ್ತೊಮ್ಮೆ ಮುಂದಿನ ಸಂಚಿಕೆಯಲ್ಲಿ ಸಿಗೋಣ

*-ರಾಘವೇಂದ್ರ ಕುಂದಲಗುರ್ಕಿ*


Copyright © KCO – Brindavana

ಸಂಚಿಕೆ
೧೧
ಜುಲೈ, ೨೦೧೭

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

# ಅಭಿಮಾನಿ ತಂಡದ ನುಡಿ

*"ಎಂದೆಂದಿಗೂ ನಾವ್ ಕನ್ನಡಿಗರು .." ನ್ಯೂ ಜೆರ್ಸಿಯಲ್ಲಿ ಬೃಂದಾವನದ ಕನ್ನಡ ಡಿಂಡಿಮ..*



"ಎಲ್ಲಾದರೂ ಇರು, ಎಂತಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು..." ಎಂದು ಹಾಡಿದ ರಾಷ್ಟ್ರ ಕವಿ ಕುವೆಂಪುರವರ ಅಣತಿಗೆ ಅನ್ವರ್ಥವಾಗುವಂತೆ, ನ್ಯೂಜೆರ್ಸಿಯಲ್ಲಿ ಬೃಂದಾವನ ಅಭಿಮಾನಿ ತಂಡ ಕನ್ನಡ ಡಿಂಡಿಮದ ಧ್ವನಿ ಮೊಳಗಿಸಿದೆ. ಜುಲೈ ಎರಂದು ಏರ್ಪಡಿಸಿದ್ದ ಬೃಂದಾವನ ಪಿಕ್ನಿಕ್ ಕಾರ್ಯಕ್ರಮದಲ್ಲಿ ೪೦೦ ಕ್ಕೂ ಹೆಚ್ಚು ಕನ್ನಡಿಗರು ಮೊದಲ ಬಾರಿಗೆ ಉತ್ಸಾಹದಿಂದ ಭಾಗವಹಿಸಿದ್ದು ಇದಕ್ಕೊಂದು ಸಾಕ್ಷಿ. ದೂರ ದೇಶದಲ್ಲಿ ಹಲವು ವರ್ಷಗಳು, ದಶಕಗಳು ಕಳೆದರೂ ನಮ್ಮೆಲ್ಲರ ಮಾತೃಭಾಷೆ ಕನ್ನಡ, ಅದುವೇ ನಮಗೊಂದು ಕೊಂಡಿ. ಕನ್ನಡ ಕಾರ್ಯಕ್ರಮಗಳು ಎಲ್ಲೇ ನಡೆಯಲಿ ಹೇಗಾದರೂ ಭಾಗವಹಿಸಬೇಕೆನ್ನುವ ತಮ್ಮೆಲ್ಲರ ಅಭಿಮಾನ ನಿಜಕ್ಕೂ ಶ್ಲಾಘನೀಯ. ಈ ಸಲದ ಬೃಂದಾವನ ವಸಂತೋತ್ಸವ ಮತ್ತು ವನವಿಹಾರ ಕಾರ್ಯಕ್ರಮಗಳ ಯಶಸ್ಸು ಸಾರಿ ಸಾರಿ ಹೇಳುತ್ತಿದೆ, ನಮ್ಮೆಲ್ಲರ ಧ್ವನಿ ಒಂದೇ...ಎಂದೆಂದಿಗೂ ನಾವ್ ಕನ್ನಡಿಗರು..

ಈ ಸಲದ ವನವಿಹಾರದ ಕಾರ್ಯಕ್ರಮದ ಬಗ್ಗೆ ಮುಂದಿನ ಪುಟಗಳಲ್ಲಿ ವಿವರವಾಗಿ ಓದುತ್ತೀರಿ. ಆದಾಗ್ಯೂ ನನ್ನ ಕಡೆಯಿಂದ ಎರಡು ಮಾತು ಹೇಳಲೇ ಬೇಕು ಎಂದೆನಿಸುತ್ತಿದೆ. ಮುಂಜಾನೆ ಸರಿಯಾಗಿ ೧೦.೩೦ ಕ್ಕೆ ಸರಿಯಾಗಿ ಯೋಗದೊಂದಿಗೆ ಪ್ರಾರಂಭವಾದ ವನವಿಹಾರ ಕಾರ್ಯಕ್ರಮ ಸಂಜೆ ಕನ್ನಡ ಡಿಜೆ ಯೊಂದಿಗೆ ಮುಗಿದಾಗ ಏಳು ಗಂಟೆ. ದಿನದುದ್ದಕ್ಕೂ ಆಟ, ಓಟ, ಊಟ, ಮಸ್ತಿ, ಮೋಜಿಗೆ ಸುಮಧುರ ಕನ್ನಡ ಹಾಡುಗಳ ಹಿನ್ನೆಲೆ. ಪ್ರಕೃತಿಯ ಜೊತೆ ಕನ್ನಡ ಹಾಡುಗಳು ಬೆರೆತಾಗ ಆದ ಸಂತಸ ಅಷ್ಟಿಷ್ಟಲ್ಲ. ಅಂದು ಮೆರಿಲ್ ಪಾರ್ಕ್ ಪೂರ್ತಿ ಕನ್ನಡ ಮಯವಾಗಿತ್ತು.

ತಾವು ಈಗಾಗಲೇ ಗಮನಿಸಿರುವಂತೆ, ಬೃಂದಾವನ ಅಭಿಮಾನಿ ತಂಡ ಎಲ್ಲ ರೀತಿಯಿಂದಲೂ ಅತ್ಯುತ್ತಮ ಕಾರ್ಯಕ್ರಮಗಳನ್ನು ತಮ್ಮ ಮುಂದಿಡಲು ಸಾಕಷ್ಟು ಪರಿಶ್ರಮ ವಹಿಸಿ ಯೋಜಿಸುತ್ತಿದೆ. ನಮ್ಮ ಎಲ್ಲ ಯಶಸ್ಸಿನ ಹಿಂದೆ ಕನ್ನಡದ ಮೇಲಿನ ಪ್ರೀತಿಯಿಂದ ಟೊಂಕ ಕಟ್ಟಿ ಮನಸ್ಸು ಕೊಟ್ಟು ಕೆಲಸ ಮಾಡುವ ಕನ್ನಡ ಸ್ನೇಹಿತರ ಗುಂಪೇ ಇದೆ. ನಮ್ಮ ಎಲ್ಲ ಕಾರ್ಯಕ್ರಮಗಳಲ್ಲೂ ಭಾಗವಹಿಸುವ ನೀವಿದ್ದೀರಿ .. ಇನ್ನೇಕೆ ಹಿಂಜರಿತ? .. ಮುಂದಿನ ಮೈಲುಗಲ್ಲುಗಳಿಗೆ ಇವು ಮೊದಲ ಹೆಜ್ಜೆಗಳು.

ನಮ್ಮ ಮುಂದಿನ ಕಾರ್ಯಕ್ರಮ ಸೆಪ್ಟೆಂಬರ ೨೩ ರಂದು, ಸಾಹಿತ್ಯ ಬೃಂದಾವನ ಮತ್ತು ಗಣೇಶ ಹಬ್ಬ. ನಮ್ಮ ಎಲ್ಲ ಕಾರ್ಯಕ್ರಮಗಳಲ್ಲಿ ಈ ಕಾರ್ಯಕ್ರಮ ಅತ್ಯಂತ ವಿಶಿಷ್ಟ. ಸಾಹಿತ್ಯಕ್ಕೆ ಹೆಚ್ಚು ಒತ್ತು ಕೊಟ್ಟು. ಹಿರಿಯ ಸಾಹಿತಿಗಳನ್ನು ಒಂದೆಡೆ ಸೇರಿಸಿ, ಹಲವು ಗಂಟೆ ನಮ್ಮ ಸಾಹಿತ್ಯ ಲೋಕದ ಇಣುಕು ನೋಟ ತೋರಿಸುವ ಬೃಂದಾವನದ ಈ ಪ್ರಯತ್ನ ಸಾಕಷ್ಟು ಪ್ರಶಂಸೆ ಪಡೆದಿದೆ. ಈ ಸಲದ ಸಾಹಿತ್ಯ ಬೃಂದಾವನ ಕಾರ್ಯಕ್ರಮದಲ್ಲಿ  ನಿಮ್ಮನ್ನೆಲ್ಲ ಮರೆಯಲಾಗದ ಹಾಸ್ಯ ಲೋಕಕ್ಕೆ ಕೊಂಡೊಯ್ಯುವ ಪ್ರಯತ್ನ ನಡೆಯುತ್ತಿದೆ. ಇದೇ ಸಂದರ್ಭದಲ್ಲಿ " ಬದುಕು ಜಟಕಾ ಬಂಡಿ" ಎಂಬ ಅನುಭವಗಳ ಸಂಕಲನವೊಂದನ್ನು ಹೊರತರುವ ಯೋಜನೆಯಿದೆ. ಈಗಾಗಲೇ ಲೇಖನಗಳಿಗಾಗಿ ಆಹ್ವಾನವನ್ನು ಪ್ರಕಟ ಪಡಿಸಿದ್ದೇವೆ. ಈ ಹಿಂದೆ ಬರೆದಿದ್ದರೆ, ಬರೆಯುವ ಆಸಕ್ತಿಯಿದ್ದರೆ ದಯವಿಟ್ಟು ನಿಮ್ಮ ಲೇಖನ ಕಳುಹಿಸಿ. ಹೊರ ನಾಡ ಕನ್ನಡಿಗರ ಈ ಪುಸ್ತಕ, ಕನ್ನಡ ಸಾಹಿತ್ಯ ಲೋಕಕ್ಕೊಂದು ಕಿರು ಕಾಣಿಕೆಯಾಗಲಿ ಎಂಬ ಆಸೆ ನಮ್ಮದು.

ಗಣೇಶೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಕ್ಕಾಗಿ ಬೆಂಗಳೂರಿನ ಪ್ರಖ್ಯಾತ ಪ್ರಭಾತ್ ಕಲಾವಿದರು ನ್ಯೂ ಜೆರ್ಸಿಗೆ ಬರಲಿದ್ದಾರೆ. ತಮ್ಮ ಇತ್ತೀಚಿನ ಹೆಸರಾಂತ ನೃತ್ಯ ನಾಟಕ " ಕರು ನಾಡ ವೈಭವ" ವನ್ನು ಪ್ರದರ್ಶಿಸಲಿದ್ದಾರೆ. ಐವತ್ತು ವರ್ಷಗಳ ಇತಿಹಾಸ, ಸಾವಿರಾರು ನೃತ್ಯ ನಾಟಕಗಳನ್ನು ವಿಶ್ವದಾದ್ಯಂತ ಪ್ರದರ್ಶಿಸಿರುವ ಪ್ರಭಾತ ಕಲಾವಿದರು ನ್ಯೂಜೆರ್ಸಿ ಕನ್ನಡಿಗರನ್ನೆಲ್ಲ ಬ್ರಾಡ್ ವೆ ಶೋಗಳಂತೆ ಒಂದು ವಿಸ್ಮಯ ಲೋಕಕ್ಕೆ ಕೊಂಡೊಯ್ಯುವ ಕನಸು ಕಾಣುತ್ತಿದ್ದೇವೆ ನಾವೆಲ್ಲಾ ಒಟ್ಟಾರೆ ಕುಳಿತು ಕನ್ನಡದ ಬ್ರಾಡ್ ವೇ ಶೋ ನೋಡುವ ಅವಕಾಶವನ್ನು ನೀವು ಖಂಡಿತ ತಪ್ಪಿಸಲಾರಿರಿ. ನಮ್ಮ ಯುವ ಬೃಂದಾವನದ ಮಕ್ಕಳೆಲ್ಲ ಸೇರಿ " ಕೆರಿಯರ್ ಡೆವಲಪ್ಮೆಂಟ್" ಬಗ್ಗೆ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಒಟ್ಟಾರೆ ಎಲ್ಲರಿಗು ಅನ್ವಯವಾಗುವಂತೆ ಕಾರ್ಯಕ್ರಮ ರೂಪಿಸುವುದೇ ನಮ್ಮ ಆಕಾಂಕ್ಷೆ. ಸೆಪ್ಟೆಂಬರ ೨೩ರ ಕಾರ್ಯಕ್ರಮವನ್ನು ನಿಮ್ಮ ದಿನಚರಿಯಲ್ಲಿ ಗುರುತಿಸಿಕೊಳ್ಳಿ. ಸದ್ಯದಲ್ಲಿಯೇ ಕಾರ್ಯಕ್ರಮದ ಕರಪತ್ರ ಬಿಡುಗಡೆ ಮಾಡಲಿದ್ದೇವೆ.

ಅಭಿಮಾನಿ ತಂಡ ತನ್ನ ಇತರ ಚಟುವಟಿಕೆಗಳನ್ನು ಕೂಡ ಬಹು ಉತ್ಸುಕತೆಯಿಂದ ಮುಂದುವರೆಸಿಕೊಂಡು ಹೋಗುತ್ತಿದೆ. ಈ ಸಲದ ೫ ಕಿ. ಮೀ ಮತ್ತು ೧೦ ಕಿ. ಮೀ ಓಟದಿಂದ ಮತ್ತು ಯುಗಾದಿ ಹಬ್ಬದಲ್ಲಿ ನಾವು ಸಂಗ್ರಹಿಸಿದ ಹಣವನ್ನು ಬೆಂಗಳೂರಿನಲ್ಲಿರುವ ಕನ್ನಡ ಮಕ್ಕಳನ್ನು ಸಲಹುತ್ತಿರುವ ಸಂಸ್ಥೆಗೆ ದೇಣಿಗೆ ಇತ್ತಿದ್ದೇವೆ.

ಮತ್ತೊಮ್ಮೆ " ಎಂದೆಂದಿಗೂ ನಾವ್ ಕನ್ನಡಿಗರು " ಎನ್ನುತ್ತಾ..

ಹಾರ್ದಿಕ ಶುಭಾಶಯಗಳೊಂದಿಗೆ

*ಡಾ. ಅಶೋಕ್ ಕಟ್ಟಿಮನಿ*
ಅಭಿಮಾನಿ ತಂಡದ ಪರವಾಗಿ
ಅಧ್ಯಕ್ಷರು, ಬೃಂದಾವನ ಕನ್ನಡ ಕೂಟ

**ಮತ್ತೊಮ್ಮೆ ಎಂದೆಂದಿಗೂ ನಾವ್ ಕನ್ನಡಿಗರು !**

**ಜೈ ಕರ್ನಾಟಕ !**


Copyright © KCO – Brindavana

ಹಿನ್ನೋಟ

## *ಬೃಂದಾವನ ವನವಿಹಾರ*



ಮಹೇಶ್ ರಂಗಸ್ವಾಮಿ

ಜುಲೈ ೮, ೨೦೧೭ ಶನಿವಾರದಂದು, ನ್ಯೂಜೆರ್ಸಿಯ ಕನ್ನಡ ಜನತೆಗೆ ನಮ್ಮ ನಾಡು, ನುಡಿ ಹಾಗು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರ ಬಿಂದುವಾದ ಬೃಂದಾವನ ಕನ್ನಡ ಕೂಟ ವನವಿಹಾರವನ್ನು (picnic) ಹಮ್ಮಿಕೊಂಡಿದ್ದರು.

ಇಸಲಿನ್ ನಗರದ ಮೇರಿಲ್ ಪಾರ್ಕ್ ನಲ್ಲಿ ನಡೆದ ವನವಿಹಾರಕ್ಕೆ, ಸುಮಾರು ೪೦೦ಕ್ಕೂ ಹೆಚ್ಚಿನ ಮಂದಿ ಕನ್ನಡಿಗರು ಆಗಮಿಸಿ ನಾನಾ ಚಟುವಟಿಕೆಗಳಲ್ಲಿ ಭಾಗವಹಿಸಿ ಆನಂದಿಸಿದರು. ಹಿರಿಯರು, ಕಿರಿಯರು ಹಾಗು ಮುಖ್ಯವಾಗಿ ಕರ್ನಾಟಕದಿಂದ ಆಗಮಿಸಿದ್ದ ಅಜ್ಜ, ಅಜ್ಜಿಯರು ಎಲ್ಲರೊಂದಿಗೆ ಕಳೆದ ಸಮಯ ಅವಿಸ್ಮರಣೀಯ!

ಬೃಂದಾವನ ಅಭಿಮಾನಿ ತಂಡ ಆಯೋಜಿಸಿದ್ದ ಕಾರ್ಯಕ್ರಮಗಳು ಎಲ್ಲಾ ವಯಸ್ಸಿನವರನ್ನು ಮನದಲ್ಲಿಟ್ಟುಕೊಂಡು ತಯಾರಿ ಮಾಡಿದಂತಿತ್ತು. ಸುಮಾರು ೧೦:೩೦ಕ್ಕೆ ಯೋಗದಿಂದ ಪ್ರಾರಂಭಗೊಂಡ ಕಾರ್ಯಕ್ರಮ, ನಂತರ ಚಾರಿಟಿ ಅಂಗವಾಗಿ ಹಮ್ಮಿಕೊಂಡಿದ್ದ ೫ ಕಿ. ಮೀ ಮತ್ತು ೧೦ ಕಿ. ಮೀ ಓಟದಲ್ಲಿ ೮೫ಕ್ಕೂ ಹೆಚ್ಚು ಉತ್ಸಾಹಿ ಓಟಗಾರರು ಭಾಗವಹಿಸಿದರು. ಈ ಓಟಗಾರರನ್ನು ಉತ್ತೇಜಿಸಿ ಹಾಗು ದಣಿದವರಿಗೆ ನೀರಿನ ನೆರವು ನೀಡಿದ ಸ್ವಯಂಸೇವಕರ ಹಾಸ್ಯಲಾಸ್ಯಗಳು ನೋಡುಗರ ಮನಸ್ಸಿಗೆ ಮುದ ಕೊಟ್ಟಿತು. ಓಟ ಮುಗಿಯುತ್ತಿದ್ದಂತೆಯೇ, ಮರಗಳ ನೆರಳಿನಲಿ ಊಟದ ವ್ಯವಸ್ಥೆ ಮಾಡಲಾಗಿತ್ತು, ಚಪಾತಿ, ಪಲ್ಯ, ಮಾವಿನಕಾಯಿ ಚಿತ್ರಾನ್ನ, ತೆಂಗಿನಕಾಯಿ ಚಟ್ನಿ, ಮೊಸರನ್ನ, ಉಪ್ಪಿನಕಾಯಿ, ಗುಲಾಬ್ ಜಾಮೂನ್ ರಸಭರಿತವಾಗಿತ್ತು. ಹಾಗು ಊಟದ ಇನ್ನೊಂದು ವಿಶೇಷವೇನೆಂದರೆ, ಉಪಚರಿಸಿ, ಬಡಿಸಿದರವರು ನಮ್ಮ ಕನ್ನಡದ ಪುಟಾಣಿಗಳು. ಅವರು ಉಪಚರಿಸಿದ ರೀತಿ, ಬಡಿಸಿದ ಬಗೆ ಎಲ್ಲರನ್ನು ಆಶ್ಚರ್ಯಚಕಿತರನ್ನಾಗಿಸಿತ್ತು. ಊಟ ಮುಗಿಸಿ ವಿಶ್ರಮಿಸುತ್ತಿರುಲು, ಕಾಫಿ ಹಾಗು ಮಸಾಲೆ ಮಜ್ಜಿಗೆಯ ಉಪಚಾರ, ನಡುವೆ ಸುಮಧುರ ಕನ್ನಡ ಚಲನಚಿತ್ರ ಗೀತೆಗಳು ಎಲ್ಲರ ಮೈಮರೆಸಿತ್ತು.




ವಿಶ್ರಾಂತಿ ಪಡೆದ ಸ್ವಲ್ಪ ಸಮಯದಲ್ಲೇ, ವಯಸ್ಸಿಗೆ ಅನುಗುಣವಾಗಿ ವೈವಿಧ್ಯಮಯ ಆಟಗಳನ್ನು ಆಯೋಜಿಸಿಲಾಗಿತ್ತು. ಅಜ್ಜ-ಅಜ್ಜಿಯರಿಗೆ: ಚೌಕಬಾರಾ, ಮ್ಯುಸಿಕ್ ಚೇರ್, ಜ್ಞಾಪಕ ಸ್ಪರ್ಧೆ (Memory Game), ೧೦೦ ಮೀಟರ್ ನಡೆಯುವ ಸ್ಪರ್ಧೆ, ಚಿಕ್ಕ ಮಕ್ಕಳು ಹಾಗು ಕಿರಿಯರಿಗೆ : ಮ್ಯುಸಿಕ್ ಚೇರ್, ೫೦ ಮೀ. ಓಟ, ಚೆಂಡನ್ನು ಬಕೆಟ್ ನಲ್ಲಿ ಎಸೆಯುವುದು, ಮತ್ತು ಲಗ್ಗೋರಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು, ಚಿಣ್ಣರ ಸ್ಫೂರ್ತಿದಾಯಕ ಆಟಗಳು ನಮ್ಮೆಲ್ಲರನ್ನು ನಮ್ಮ ಬಾಲ್ಯಕ್ಕೆ ಕರೆದೊಯ್ದಿತ್ತು. ಯುವಕ, ಯುವತಿಯರಿಗೆ ಆಯೋಜಿಸಿದ್ದ ೧೦೦ ಮೀ. ೪೦೦ ಮೀ. ಓಟ, ವಾಲಿಬಾಲ್, ನೀರು ತುಂಬಿದ ಬಲೂನ್ ಗಳ ಕ್ರೀಡೆ ಬಹಳ ಮೋಜು ತಂದಿತು. ಅಷ್ಟೇ ಅಲ್ಲದೆ, ಪುರುಷರ ಕ್ರಿಕೆಟ್ ಆಟ ಭರ್ಜರಿಯಾಗಿತ್ತು. ಈ ಬಾರಿ ಕ್ರಿಕೆಟ್ ಆಟದಲ್ಲಿ ತುಂಬಾ ಜನರು ಆಸಕ್ತಿ ತೋರಿದ್ದರಿಂದ ನಾಲ್ಕು ತಂಡ ಮಾಡಿ ಆಡಿಸಬೇಕಾಯಿತು.

ಈ ನಡುವೆ, ಬೃಂದಾವನ ಪುರುಷರು ಕಲ್ಲಂಗಡಿ ಹಣ್ಣುಗಳನ್ನು ಹಚ್ಚಿ ವಿತರಿಸುತ್ತಿರಲು, ಬೃಂದಾವನ ಬೆಡಗಿಯರು ಮತ್ತೊಂದೆಡೆ ಭೇಲ್ ಪುರಿಯ ತಯಾರಿಯಲ್ಲಿ ಮಗ್ನರಾಗಿದ್ದರು, ಒಟ್ಟಾರೆ ಆಗಮಿಸಿದ ಎಲ್ಲಾ ಅತಿಥಿಗಳಿಗೆ ಸ್ವಲ್ಪವೂ ಅಡಚಣೆಯಾಗದಂತೆ ನೋಡಿಕೊಂಡ ಎಲ್ಲಾ ಸ್ವಯಂಸೇವಕರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು. ಗಗನದಲ್ಲಿ ಸೂರ್ಯನು ಜಾರುತಿರಲು, ಕನ್ನಡ ಡಿ. ಜೆ. ಯವರ ಸಂಗೀತ ಸಂಜೆಯಲ್ಲಿ ಮೈಮರೆತ ಕನ್ನಡ ಕುಲಬಾಂಧವರು ಸಣ್ಣ ಹೆಜ್ಜೆ ಹಾಕುತ್ತಾ ಕುಣಿತದಲ್ಲಿ ತಲ್ಲಿನರಾಗಿದ್ದರು, ಕಿರಿಯರ ನೃತ್ಯ ವೈಭವ ನೋಡುಗರ ಮೆಚ್ಚುಗೆಯಾಗಿತ್ತು.


ದಿನವಿಡೀ ಆಟ, ಊಟ, ಓಟಗಳ ನಡುವೆ ಸಮಯ ಕಳೆದ ಅರಿವೇ ನಮಗಾಗಲಿಲ್ಲ, ಕೊನೆಗೆ ಸ್ಪರ್ಧೆಯಲ್ಲಿ ಭಾಗವಹಿಸಿದವರಿಗೆ, ಗೆದ್ದ ಕ್ರೀಡಾಪಟುಗಳಿಗೆ, ನೆರೆದ ಹಿರಿಯರ ನೇತೃತ್ವದಲ್ಲಿ ಅಭಿನಂದನ ಪತ್ರ ಹಾಗು ಪ್ರಶಸ್ತಿಗಳನ್ನು ವಿತರಿಸಿ ಗೌರವಿಸಲಾಯಿತು. ಬೃಂದಾವನ ಅಭಿಮಾನಿ ತಂಡ, ಆಗಮಿಸಿದ ಕನ್ನಡದ ಬಂಧುಗಳಿಗೆಲ್ಲ ಧನ್ಯವಾದಗಳನ್ನು ಅರ್ಪಿಸುತ್ತಾ, ಸ್ಮರಣೀಯ ವನವಿಹಾರ ಮುಕ್ತಾಯಗೊಳಿಸಿತು.












Copyright © KCO – Brindavana

ಸಂಚಿಕೆ
೧೧
ಜುಲೈ, ೨೦೧೭



ಹಿನ್ನೋಟ

## *ಮನೆ-ಮನೆಗಳಲ್ಲಿ ನಲಿದಾಡಿದ ಸಾಲಿಗ್ರಾಮದ ಕಡಗೋಲು ಕೃಷ್ಣ ..*



ರಾಘವೇಂದ್ರ ಕುಂದಲಗುರ್ಕಿ

**ನ್ಯೂಜೆರ್ಸಿಯ** ಶ್ರೀಕೃಷ್ಣ ಮಠದಲ್ಲಿ ಸಾಲಿಗ್ರಾಮ ಶಿಲಾರೂಪಿಯಾದ ಶ್ರೀಕೃಷ್ಣನ ಮೂರ್ತಿಯು ಹೊಸದಾಗಿ ನಿರ್ಮಿಸಿದ ಗರ್ಭಗುಡಿಯಲ್ಲಿ, ೧೦೦೮ ಬ್ರಹ್ಮ ಕಳಶದ ಅಭಿಷೇಕದೊಂದಿಗೆ ಅತ್ಯಂತ ವಿಜೃಂಭಣೆಯಿಂದ ಜೂನ್ ೮ ರಂದು ಪ್ರತಿಷ್ಠಾಪನೆಗೊಂಡಿತು. ಶ್ರೀ ಪುತ್ತಿಗೆ ಮಠದ ಶ್ರೀಸುಗುಣೇಂದ್ರ ತೀರ್ಥ ಸ್ವಾಮೀಜಿ, ಶ್ರೀ ಬನ್ನಂಜೆ ಗೋವಿಂದಾಚಾರ್ಯರು, ಚಿನ್ಮಯ ಸಂಸ್ಥೆಯ ಶ್ರೀ ಸ್ವಾಮಿ ಶಾಂತಾನಂದ, ಮತ್ತು ಸಾವಿರಾರು ಭಕ್ತರೊಡನೆ ಶ್ರೀ ಕೃಷ್ಣ, ಶ್ರೀ ಮುಖ್ಯಪ್ರಾಣ ಹಾಗು ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನ ಪ್ರತಿಷ್ಠಾಪನೆಗೊಂಡಿತು. ನೂರಾರು ಭಕ್ತಾದಿಗಳು ಸಾಲಾಗಿ ನಿಂತು ೧೦೦೦ ಕಲಶದ ತಯಾರಿ, ಅಭಿಷೇಕದಲ್ಲಿ ಪಾಲ್ಗೊಂಡಿದ್ದು ಒಂದು ಅವಿಸ್ಮರಣೀಯ ಘಟನೆ. ಈ ಮೂರ್ತಿಯ ವಿಶೇಷವೆಂದರೆ, ಪ್ರತಿಷ್ಠಾಪನೆಯ ಮೊದಲು ಎಲ್ಲ ಭಕ್ತರಿಂದ ಅವರ ಸ್ವಗೃಹಗಳಲ್ಲೇ ವಿಶೇಷವಾಗಿ ಪೂಜಿಸಿಗೊಂಡು, ನೂರಾರು ಭಕ್ತರಿಗೆ ಸಾಲಿಗ್ರಾಮ ಶಿಲಾ ಮೂರ್ತಿಯನ್ನು ಸ್ವಯಂ ಮುಟ್ಟಿ ಭಜಿಸುವ ವಿಶೇಷ ಅನುಭವವನ್ನು ಅನುಗ್ರಹಿಸಿತು.

ಸಾಲಿಗ್ರಾಮ ಶಿಲೆ ಅತ್ಯಂತ ಪವಿತ್ರವಾದ ಶಿಲೆ. ನೇಪಾಳದ ಗಂಡಕಿ ನದಿಯಲ್ಲಿ ಮಾತ್ರ ಸಿಗುವ ಈ ಶಿಲೆಗೆ ಅತ್ಯಂತ ಭಾರಿ ಬೆಲೆ. ಸಾಲಿಗ್ರಾಮ ಶಿಲೆಯ ವೈಶಿಷ್ಟ್ಯವೇನೆಂದರೆ ಅದರಲ್ಲಿ ಶ್ರೀಕೃಷ್ಣನ ಸಾನಿಧ್ಯ ಸದಾ ಇರುವುದೆಂಬ ನಂಬಿಕೆ. ವಿಷ್ಣುವಿನ ದಶಾವತಾರದ ರೂಪಗಳಲ್ಲಿ ಸಿಗುವ ಈ ಸಾಲಿಗ್ರಾಮಗಳು ಸ್ಥಳದ ಮಹಿಮೆ ಹಾಗು ಸಾನಿಧ್ಯವನ್ನು ಹೆಚ್ಚಿಸುತ್ತದೆ ಎಂದು ಪುರಾಣೋತ್ತರ ಉಲ್ಲೇಖಗಳು ಉಲ್ಲೇಖಿಸಿವೆ. ೬ ತಿಂಗಳ ಪರಿಶ್ರಮದ ಹುಡುಕಾಟದ ನಂತರ ಸಿಕ್ಕ ಈ ಏಕ ಶಿಲಾ ಸಾಲಿಗ್ರಾಮವು, ಶ್ರೀಕೃಷ್ಣನ ಪ್ರತಿಮಾ ಮೂರ್ತಿಯಾಗಿ ಹರೀಶ್ ಆಚಾರ್ಯ ಹಾಗು ಅವರ ತಂಡದ ಶಿಲ್ಪಿಗಳಿಂದ ಕೆತ್ತಲ್ಪಟ್ಟಿದೆ.

ಸಾಲಿಗ್ರಾಮ ಶ್ರೀ ಕೃಷ್ಣನ ಪ್ರತಿಮಾ ಮೂರ್ತಿ ಮೊದಲು ಶ್ರೀಸುಗುಣೇಂದ್ರ ತೀರ್ಥ ಸ್ವಾಮೀಜಿಯವರಿಂದ ಉಡುಪಿಯ ಮಧ್ವ ಸರೋವರದಲ್ಲಿ ಮಿಂದು, ರಥ ಬೀದಿಯ ಮೆರವಣಿಗೆಯಲ್ಲಿ ಮೆರೆದು ಪ್ರಸ್ತುತ ಪರ್ಯಾಯದಲ್ಲಿರುವ ಶ್ರೀ ವಿಶ್ವೇಶತೀರ್ಥ ಶ್ರೀಪಾದರಿಂದ ಪೂಜಿಸಲ್ಪಟ್ಟು, ಅಮೇರಿಕಾದ ಭಕ್ತರ ಮನೆಗಳಲ್ಲಿ ತನ್ನ ಸಂಚಾರವನ್ನು ಪ್ರಾರಂಭಿಸಿತು. ನೂರಾರು ಭಕ್ತಾದಿಗಳ ಮನೆಯಲ್ಲೋ ಅಥವಾ ಅವರ ಸ್ನೇಹಿತರ ಮನೆಯಲ್ಲೋ, ಶ್ರೀಕೃಷ್ಣ ಮಠದಲ್ಲೋ, ಚಿನ್ಮಯ ಮಿಶನಲ್ಲೋ ಬೆಳಗ್ಗೆಯಿಂದ ಸಂಜೆಯವರೆಗೂ, ಹಲವು ಬಾರಿ ಮಧ್ಯರಾತ್ರಿಯವರೆಗೂ ಅಡೆ-ತಡೆಯಿಲ್ಲದೆ ಸಂಚರಿಸಿ, ಪೂಜಿಸಲ್ಪಟ್ಟಿತು. ೧೫ ದಿನಗಳ ವಿಶೇಷ ಹೋಮ-ಹವನಾದಿಗಳೊಂದಿಗೆ ಮುದ್ದುಕೃಷ್ಣನ ಪ್ರತಿಷ್ಠಾಪನ ಕಾರ್ಯಕ್ರಮ ಸಡಗರದಿಂದ ಪ್ರಾರಂಭವಾಯಿತು.

ಈ ಗರ್ಭಗುಡಿ ಅಮೇರಿಕಾ ಖಂಡದಲ್ಲೇ ವಿಶೇಷವಾದುದು. ಬರ್ಮಾ ಟೀಕ್ ಮರದಿಂದ ಅತ್ಯಂತ ಕಲಾತ್ಮಕವಾಗಿ , ಶ್ರೀ ಕೃಷ್ಣನ ಸಂಪೂರ್ಣ ಕಥೆ, ದಶಾವತಾರಗಳು, ಕುದುರೆಯ ಮುಖಗಳಿರುವ ಹಾಗು ನವಿಲು ಆಕಾರವಿರುವ ಗೋಪುರಗಳು ಇನ್ನು ಹಲವಾರು ವಿಗ್ರಹಗಳಿಂದ ರೂಪುಗೊಂಡಿದೆ.

ಪ್ರತಿಷ್ಠಾಪನ ವಿಶೇಷವಾಗಿ ನಡೆದ "ಜ್ಞಾನ ಸಂಗಮ" ದಲ್ಲಿ ವಿವಿಧ ಮತ, ಧರ್ಮಗಳ ಗುರುಗಳೊಂದಿಗೆ ವಿಚಾರ ಸಂಕೀರ್ಣ, ಶ್ರೀ ಬನ್ನಂಜೆ ಗೋವಿಂಚಾರ್ಯರಿಂದ "ಭಾಗವತ ಸಪ್ತಾಹ" ಮತ್ತು ಹಲವಾರು ಭಕ್ತಾದಿಗಳಿಂದ ಸಾಮೂಹಿಕ "ಭಗವದ್ಗೀತಾ" ಪಾರಾಯಣ,ಸಂಗೀತ ಹಾಗು ನೃತ್ಯ ಕಾರ್ಯಕ್ರಮಗಳು ಆಯೋಜಿಸಲ್ಪಟ್ಟು, ಪ್ರತಿಷ್ಠಾಪನಕ್ಕೆ ಮೆರುಗು ತಂದವು.

ಹಿಂದಿನ ಸಂಚಿಕೆಯಲ್ಲಿ ಪ್ರಕಟಿಸಲಾದ ಎಡಿಸನ್ ನಗರದಲ್ಲಿ ಉಡುಪಿಯ ಪುತ್ತಿಗೆ ಮಠದ ಶ್ರೀಕೃಷ್ಣ ವಿಗ್ರಹ ಪ್ರತಿಷ್ಠಾಪನೆ ಬಗ್ಗೆ ಲೇಖನ ಓದಿ








Copyright © KCO – Brindavana

ಸಂಚಿಕೆ
೧೧
ಜುಲೈ, ೨೦೧೮

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## *ಸಂತೃಪ್ತಿಯಲ್ಲಿ ಸಂವಾದ*



ಅನಿಲ್ ಭಾರಧ್ವಾಜ

ಭಾನುವಾರ, ಜುಲೈ ೮ ರಂದು ಉಷಾ-ಪ್ರಸನ್ನರವರ ಮನೆ 'ಸಂತೃಪ್ತಿ' ಯಲ್ಲಿ ಪ್ರೊ. ಕೃಷ್ಣೇಗೌಡರು ಮತ್ತು ಶ್ರೀವತ್ಸ ಜೋಶಿಯವರ ಕನ್ನಡ ಸಾಹಿತ್ಯ ಸಂವಾದ ನಡೆಯಿತು. ಕಾರ್ಯಕ್ರಮದ ವೈಶಿಷ್ಟ್ಯವೇನೆಂದರೆ, ಸಂವಾದದೊಂದಿಗೆ 'ಭಾವಧಾರೆ' ಎಂಬ ಒಂದು ಸುಂದರ ಭಾಗವಿತ್ತು. ಅದರಲ್ಲಿ ಸ್ಥಳೀಯ ಗಾಯಕರು ಜನಪ್ರಿಯವಾದ, ಅರ್ಥಗರ್ಭಿತವಾದ ಹಾಡುಗಳನ್ನು ಹಾಡಿದರು, ತದನಂತರ ಕೃಷ್ಣೇಗೌಡರು ಆ ಹಾಡುಗಳ ಒಳಾರ್ಥ, ಕವಿಗಳ ಬರಹದ ಶೈಲಿ, ಸಂಗೀತ ನಿರ್ದೇಶಕರ ರಾಗ ಮತ್ತು ಸ್ವರ ಸಂಯೋಜನೆ ಇತ್ಯಾದಿ ನಾಜೂಕಾದ ವಿಷಯಗಳನ್ನು ನೆರೆದ ಕನ್ನಡಾಭಿಮಾನಿಗಳಿಗೆ ತಿಳಿಸಿಕೊಟ್ಟರು. ಒಂದು ಕವಿತೆಯ ಹಿಂದೆ ಅಷ್ಟೊಂದು ಸೂಕ್ಷ್ಮ ವಿಚಾರವಿರುತ್ತದೆಂಬುದು ತಿಳಿದು ಪ್ರೇಕ್ಷಕರು ದಂಗುಬಡೆದಂತಾದರು.

“ವ್ಯಥೆಗಳ ಕಳೆಯುವ ಕಲೆಗಾರ, ನಿನ್ನ ಕಲೆಗೆ ಯಾವುದು ಭಾರ" ಆ.ನ.ಕೃ ಕವನದಿಂದ ತಮ್ಮ ಮಾತು ಶುರುಮಾಡಿದ ಗೌಡರು, ತಮ್ಮ ಕಲಾಪ್ರತಿಭೆಯನ್ನು ನಮಗೆ ತೋರಿಸಿ, ಸಮಯ ಕಳೆದದ್ದೇ ಗೊತ್ತಾಗದಂತೆ ಮಾಡಿದರು. ಶ್ರೀವತ್ಸ ಜೋಶಿಯವರು ಮರಾಠಿ ತಮ್ಮ ಮಾತೃಭಾಷೆಯಾದರು, ತಮಗೆ ಹಲವಾರು ಭಾಷೆಗಳು ತಿಳಿದಿದ್ದರೂ, ತಮ್ಮ ಭಾವನೆ ಅಭಿವ್ಯಕ್ತಿಗೊಳಿಸಲು ಕನ್ನಡದಲ್ಲೇ ಬರೆಯುವುದು ಸಹಜವೆನಿಸುವುದೆಂದರು. ಅದೇ ಮಾತು ಮುಂದುವರೆಸಿದ ಕೃಷ್ಣೇಗೌಡರು, ಭಾಷೆಯ ಮೇಲೆ ಹುಚ್ಚು ಅಭಿಮಾನ ತೋರಿಸದೆ, ಭಾಷೆಯಿಂದ ಅವರವರ ವ್ಯಕ್ತಿತ್ವ ರೂಪಿಸಿಕೊಳ್ಳಬೇಕೆಂದು ಸಲಹೆ ನೀಡಿದರು. ಬರಿದೇ ಅರ್ಥದ ನೆಲೆಯಲ್ಲಿ ಮಾತ್ರ ವ್ಯವಹರಿಸುವ ಭಾಷೆಯಲ್ಲಿ, ಭಾವವನ್ನು ಪ್ರದರ್ಶಿಸಲಾಗುವುದಿಲ್ಲ. ಅದಕ್ಕೆ ಭಾವದ ನೆಲೆಯ ಭಾಷೆ ಬೇಕು, ಅದಕ್ಕೆ ವಿಶ್ವವಿದ್ಯಾನಿಲಯದ ಕನ್ನಡ ಬಿಟ್ಟು, ಊರು-ಹಳ್ಳಿಗಳ ಕನ್ನಡವನ್ನು ಆಲಿಸಬೇಕು, ಅನುಭವಿಸಬೇಕು ಎಂದು ಅವರದೇ ಆದ ಹಾಸ್ಯಶೈಲಿಯಲ್ಲಿ ವಿವರಿಸಿದರು. ಈಗಿನ ಮಾಧ್ಯಮಗಳಲ್ಲಿ ಕನ್ನಡಭಾಷೆಯ ದುಃಸ್ಥಿತಿ ಬಗ್ಗೆ ಮಾತಾಡುವಾಗ, “ಕೊಚ್ಚೇವು ಕನ್ನಡದ ಶೇಪ..” ಎಂದು ಅಣುಕುವಾಡಿನಿಂದ ಜೋಶಿಯವರು ತಮ್ಮ ಖೇದ ತಿಳಿಹಾಸ್ಯದಿಂದಲೇ ಹಂಚಿಕೊಂಡರು. ಭಾಷೆ-ಬದುಕು ಎಲ್ಲಿ ನೈಸರ್ಗಿಕವಾಗಿ ಮಿಲನವಾಗಿರುತ್ತವೆಯೋ ಅಲ್ಲಿ ಕ್ರಿಯಾತ್ಮಕ ಪರಿಸರ ನಿರ್ಮಾಣವಾಗುತ್ತದೆಂದು ಗೌಡರು ಹೇಳಿದರು. ಕ್ರಿಯಾಶೀಲವಾದ ಭಾಷೆಯ ಸೊಬಗೇ ಬೇರೆ, ನಿಘಂಟಿನ ಸಪ್ಪೆ ಪದಗಳೇ ಬೇರೆ ಎಂದು ಹಲವಾರು ಹಾಸ್ಯಮಯ ಹಾಡುಗಳಿಂದ ಉದಾಹರಣೆ ಕೊಟ್ಟರು. ಕೃಷ್ಣೇಗೌಡರ ಈ ಬಹುಮುಖ ಪ್ರತಿಭೆ ಕಂಡು ನೆರೆದಿದ್ದ ಸಭಿಕರು ಆಶ್ಚರ್ಯಚಕಿತರಾಗಿ, ನಿಶ್ಚಲರಾಗಿ ಕಾರ್ಯಕ್ರಮ ಅಂತ್ಯವಾಗುವ ವರೆಗೆ ಅದರ ಸಿಹಿಯನ್ನು ಸವಿದರು. ಇನ್ನೂ ಬೇಕು ಎನ್ನುವ ಬಯಕೆ ಅವರ ಮುಖಗಳಲ್ಲಿ ತೋರುತ್ತಿರುವಂತೆ ಭಾಸವಾಗುತ್ತಿತ್ತು. ಸಂವಾದದ ಮುಂದಿನ ಕಂತಿಗೆ ಎಲ್ಲರೂ ಆಗಲೇ ಕಾದುನೋಡುತ್ತಿದ್ದಾರೆ ಎಂದರೆ ಉತ್ಪ್ರೇಕ್ಷವೇನಲ್ಲ.




*ನಮ್ಮ ಅಭಿಮಾನಿ ತಂಡದ ಪ್ರಶಾಂತ್, ಈ ಕಾರ್ಯಕ್ರಮದ ಸಂಪೂರ್ಣ ವೀಡಿಯೊ ಮಾಡಿ ಯೂಟ್ಯೂಬ್ನಲ್ಲಿ ಹಾಕಿದ್ದಾರೆ. ಬಿಡುವು ಇದ್ದಾಗ ನೋಡಿ ನೀವೂ ಆನಂದಿಸಿ .*

ಸಂವಾದ ಭಾಗ ೧ ಸಂವಾದ ಭಾಗ ೨ (ಭಾವಧಾರೆ)

ಸ್ವತಃ ಶ್ರೀವತ್ಸ ಜೋಶಿಯವರೇ ತಮ್ಮ ಫೇಸ್ಬುಕ್ನಲ್ಲಿ ಕಾರ್ಯಕ್ರಮವನ್ನು ಹೀಗೆ ಶ್ಲಾಘಿಸಿದ್ದಾರೆ.

***ಕೃಷ್ಣೇಗೌಡ್ರನ್ನ ನಿಲ್ಲಿಸ್ಬೇಡಿ, ಕೂತ್ಕೊಳ್ಳಿ ಮಾತಾಡ್ಸಿ, ಪರಿಣಾಮ ನೋಡಿ!***

ನ್ಯೂ ಜೆರ್ಸಿಯ ಉಷಾ+ಪ್ರಸನ್ನ ಕುಮಾರ್ ಅವರ 'ಸಂತೃಪ್ತಿ' ಮನೆಯಲ್ಲಿ ಮೂರ್ನಾಲ್ಕು ವರ್ಷಗಳ ಹಿಂದೆಯೂ ಒಮ್ಮೆ ಕೃಷ್ಣೇಗೌಡರು ಮತ್ತು ನಾನು ಸೇರಿ ಒಂದು ಕಾರ್ಯಕ್ರಮ ನಡೆಸಿಕೊಟ್ಟಿದ್ದೆವು, 'ಕೃಷ್ಣೇಗೌಡರೊಡನೆ ಸಂವಾದ' ಎಂದು ಅದಕ್ಕೆ ಹೆಸರು. ಆವತ್ತು ಸಭೆಯಲ್ಲಿದ್ದವರಿಗೆ ಬಹಳವೇ ಇಷ್ಟವಾಗಿತ್ತದು. ನಿನ್ನೆ ಜುಲೈ 9ರಂದು ಭಾನುವಾರ, ಅದೇ ಮನೆಯಲ್ಲಿ, ಅದೇ ಜಾಗದಲ್ಲಿ, ಅದೇ ಕಾರ್ಯಕ್ರಮದ ಹೊಸ ಆವೃತ್ತಿ- ಈಬಾರಿ ಅದಕ್ಕೆ 'ಭಾವಧಾರೆ'ಯ ಸೇರ್ಪಡೆ. ಗುರುಪೂರ್ಣಿಮೆಯ ಶುಭಸಂದರ್ಭ ಬೇರೆ. ನಂಬ್ತೀರೋ ಇಲ್ವೋ ಅಪರಾಹ್ನ 2 ಗಂಟೆಗೆ ಶುರುವಾಗಿ, ನಡುವೆ ವಿರಾಮವಿಲ್ಲದೆ ನಿರರ್ಗಳವಾಗಿ ನಡೆದು, ಸಂಜೆ 5:30ರ ಸುಮಾರಿಗೆ ಇನ್ನು ಕಾರ್ಯಕ್ರಮದ ಮುಕ್ತಾಯ ಎಂದು ಘೋಷಿಸಿದರೆ ಅಲ್ಲಿದ್ದ 100+ ಪ್ರೇಕ್ಷಕರು ಎದ್ದು ಹೊರಡಲಿಕ್ಕೇ ತಯಾರಿಲ್ಲ! ಇನ್ನೂ ಸ್ವಲ್ಪಹೊತ್ತು ಬೇಕು, ಇನ್ನೂ ಮಾತಾಡಬೇಕು, ಇನ್ನೂ ಕೇಳಿಸಿಕೊಳ್ಳಬೇಕು ಎಂದು ದುಂಬಾಲು!

ಕಾರಣವಿತ್ತು. ಅಲ್ಲಿದ್ದವರಾರೂ 'ಮನರಂಜನೆ'ಗೆ ಅಂತ ಬಂದಿದ್ದಲ್ಲ. ಆ ಕಾರ್ಯಕ್ರಮವನ್ನು ಆಯೋಜಿಸಿದ್ದೂ 'ಮನರಂಜನೆ'ಗೆ ಅಂತ ಅಲ್ಲ. ಕನ್ನಡದ ಕಂಪನ್ನು ಮನತುಂಬ ಆಘ್ರಾಣಿಸಿಕೊಳ್ಳಲಿಕ್ಕೆ ಅಷ್ಟೇ. ಆದರೆ ಅಷ್ಟೇ ಸಾಕಾಯ್ತು, ಅಲ್ಲಿದ್ದ ಪ್ರತಿಯೊಬ್ಬರಿಗೂ ಕನ್ನಡದ ಬಗೆಗಿನ ಪ್ರೀತಿಯ, ವಿಶೇಷ ಹಿತಾನುಭವದ, ಅಮಲು ಏರಲಿಕ್ಕೆ. ಅಲ್ಲಿ ನಡೆದ ಮಾತುಕತೆಯೆಲ್ಲ ಕನ್ನಡ ಭಾಷೆಯ ಸೊಗಡಿನ ಬಗ್ಗೆಯೇ. ಕನ್ನಡ ಕವಿಗಳು, ಸಂಗೀತಗಾರರು, ಜನಸಾಮಾನ್ಯರು ನಮ್ಮ ಪೀಳಿಗೆಗೆ ಬಳುವಳಿಯಾಗಿ ಬಿಟ್ಟುಹೋಗಿರುವ ಕನ್ನಡತನದ ಸಿರಿಯ ಬಗ್ಗೆಯೇ- ಮೊದಲ ಒಂದೂವರೆ ತಾಸು ಅವಧಿಯ ಸಂವಾದದಲ್ಲೂ, ಆಮೇಲಿನ ಎರಡು ತಾಸು ಅವಧಿಯ ಭಾವಧಾರೆಯಲ್ಲೂ. ಅಷ್ಟಾಗಿ ಒಂಥರದ ಅನೌಪಚಾರಿಕ ಆತ್ಮೀಯತೆಯ ಚೌಕಟ್ಟಿನಲ್ಲೇ ಇಡೀ ಕಾರ್ಯಕ್ರಮ ನಡೆದದ್ದು. ಬೇಂದ್ರೆಯವರ 'ಮೂಡಲ ಮನೆಯ ಮುತ್ತಿನ ನೀರಿನ...' ಲಕ್ಷ್ಮೀ ಶೈಲೇಶ್ ಹಾಡಿದರೆ, ಕೆ ಎಸ್ ನರಸಿಂಹಸ್ವಾಮಿಯವರ 'ತೌರ ಸುಖದೊಳೆನ್ನ...' ಮತ್ತು 'ಮೊದಲ ದಿನ ಮೌನ...' ವೈಷ್ಣವಿ ಕಿರಣ್ ಹಾಡಿದರು. ಜಿ.ಎಸ್.ಶಿವರುದ್ರಪ್ಪನವರ 'ಕಾಣದ ಕಡಲಿಗೆ...' ಮತ್ತು 'ಎದೆ ತುಂಬಿ ಹಾಡಿದೆನು...' ಶ್ರೇಯಸ್ ಶ್ರೀಕರ ಹಾಡಿದರು. "ಅವರು ಹಾಡಿದರು, ಇವರು ಕೇಳಿದರು" ಅಂತಾಗಿದ್ದಿದ್ರೆ ಅದೊಂದು ಮಾಮೂಲಿ ಕಾರ್ಯಕ್ರಮ ಆಗ್ತಿತ್ತು. ಕೃಷ್ಣೇಗೌಡರು ಆ ಭಾವಗೀತೆಗಳ ಸಾಹಿತ್ಯವನ್ನೂ ಸಂಗೀತವನ್ನೂ ಪದರಪದರವಾಗಿ ಬಿಚ್ಚಿ ಭಾವಸುಮದ ಒಂದೊಂದು ಪಕಳೆಯನ್ನೂ ಬಿಡಿಸಿ ಆಘ್ರಾಣಿಸಲಿಕ್ಕೆ ಕೊಟ್ಟಾಗ ಪ್ರೇಕ್ಷಕರಿಗೆ ಹಿತಾನುಭವದ ಅಮಲು ಏರದಿರುತ್ತದೆಯೇ? 'ವಾವ್! ಇದುವರೆಗೆ ನಾನು ಈ ಭಾವಗೀತೆ ನೂರಾರು ಬಾರಿ ಕೇಳಿದ್ದಿರಬಹುದು, ಆದರೆ ಕವಿ ಇದರಲ್ಲಿ ಈರೀತಿ ಅರ್ಥದ ಹೂರಣ ತುಂಬಿಸಿದ್ದಾರೆ, ಅದಕ್ಕೆ ಸಿ.ಅಶ್ವತ್ಥರಂತಹ ರಾಗಸಂಯೋಜಕರು ಇಂಥವೆಲ್ಲ ಸೂಕ್ಷ್ಮ ಕುಸುರಿಗಳನ್ನು ಹೆಣೆದು ರುಚಿ ಹೆಚ್ಚಿಸಿದ್ದಾರೆಂದು ಗೊತ್ತೇ ಇರಲಿಲ್ಲ. ಇವತ್ತು ನಾನು ಕನ್ನಡ ಭಾವಗೀತೆಗಳನ್ನು ಬರೀ ಕೇಳೋದಲ್ಲ, ಆಲಿಸಿ ಆನಂದಿಸುವ ಹೊಸ ರೀತಿಯೊಂದನ್ನು ತಿಳಿದುಕೊಂಡೆ, ಹೊಸ ಹುರುಪನ್ನು ಪಡೆದೆ!' ಎಂದು ಮನಸ್ಸು ಹಿಗ್ಗದಿರುತ್ತದೆಯೇ? ಕರಾರುವಾಕ್ಕಾಗಿ ಅದೇ ಆಯ್ತು ಅಲ್ಲಿದ್ದ ಎಲ್ಲರಿಗೂ!

ಕೃಷ್ಣೇಗೌಡರ ಸ್ಟ್ಯಾಂಡ್‌ಅಪ್ ಕಾಮಿಡಿ ನಾವೆಲ್ಲ (ಕರ್ನಾಟಕದಲ್ಲಿರುವವರೂ ಮತ್ತು ಅನಿವಾಸಿಗಳೂ) ಅಜೀರ್ಣವಾಗುವಷ್ಟು ನೋಡಿದ್ದೇವೆ/ಕೇಳಿದ್ದೇವೆ. ಆದರೆ ಅದರಾಚೆಗಿನ ಕೃಷ್ಣೇಗೌಡರ ಅಪ್ರತಿಮ ಪ್ರತಿಭೆ, ಪಾಂಡಿತ್ಯಪೂರ್ಣ ವಾಗ್ಝರಿ, ಕನ್ನಡ ಸಾಹಿತ್ಯ ಮತ್ತು ಸಂಗೀತದ ಆಳವಾದ ಅರಿವು, ಮೂಗಿನಮೇಲೆ ಬೆರಳಿಡುವಷ್ಟು ಮಟ್ಟದ ಜ್ಞಾಪಕಶಕ್ತಿ, ಸಾವಿರಾರು ಹಾಡುಗಳನ್ನು ಕಂಠಪಾಠ ಮಾಡಿಟ್ಟುಕೊಂಡಿರುವ ಯುಕ್ತಿ... ಇವೆಲ್ಲ ಹೆಚ್ಚಿನವರಿಗೆ ಗೊತ್ತೇ ಇಲ್ಲ! ಅದಕ್ಕೇ ಹೇಳಿದ್ದು ಕೃಷ್ಣೇಗೌಡ್ರನ್ನ ನಿಲ್ಲಿಸ್ಬೇಡಿ (ಅದೇ ಕುಡುಕರಸುಪ್ರಭಾತ, ಐಶ್ವರ್ಯಾರೈಸ್ತೋತ್ರ ಅಂತೆಲ್ಲ ಸವಕಲು ಐಟಮ್‌ಗಳಿಗೆ ಅವರಲ್ಲಿ ಬೇಡಿಕೆಯಿಡಬೇಡಿ), ಬದಲಿಗೆ ಅವರನ್ನು ಆರಾಮಾಗಿ ಕೂತ್ಕೊಳ್ಳಿ ಹೀಗೆ ಮಾತಾಡ್ಸಿ. ಪರಿಣಾಮ ನೋಡಿ! ಇದು ಕೃಷ್ಣೇಗೌಡರ ಪ್ರತಿಭೆಯ ಇನ್ನೊಂದು ಮಗ್ಗಲು, ಆದ್ದರಿಂದ ಅವರನ್ನು "ಶುಕ್ಲೇಗೌಡ" ಎಂದು ಗುರುತಿಸುತ್ತೀರಾದರೆ ಅದೂ ಒಳ್ಳೆಯದೇ. ನಿಮಗೆ ಈ ಮುಖ, ಈ ಮಗ್ಗಲು ಹತ್ತುಪಟ್ಟು ಹೆಚ್ಚು ಇಷ್ಟವಾಗುತ್ತದೆ ಎಂದು ಈಗಲೇ ಘಂಟಾಘೋಷವಾಗಿ ಹೇಳಬಲ್ಲೆ!


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಸಿದ್ಧಗಂಗೆಯ ಸಿದ್ಧಪುರುಷ - ಶ್ರೀ ಶಿವಕುಮಾರ ಸ್ವಾಮೀಜಿ

ಶ್ರೀಗಳ ೧೧೦ನೆಯ ಹುಟ್ಟು ಹಬ್ಬದ ಸಂಭ್ರಮದಲ್ಲಿ ನಮ್ಮ ಒಂದು ನಮನ




ರುದ್ರಕುಮಾರ್

ರಾಷ್ಟ್ರಕವಿ ಡಾ. ಜಿ. ಎಸ್. ಶಿವರುದ್ರಪ್ಪನವರು ತಮ್ಮ 'ಸಿದ್ಧಗಂಗೆಯ ಶ್ರೀಚರಣಕ್ಕೆ' ಎಂಬ ಕವಿತೆಯಲ್ಲಿ ಶ್ರೀ ಶಿವಕುಮಾರ ಸ್ವಾಮಿಗಳನ್ನು ಈ ರೀತಿ ವರ್ಣಿಸಿದ್ದಾರೆ.

ಸದ್ದುಗದ್ದಲವಿರದ ಸಾಧನೆ ಇಲ್ಲಿ ಗದ್ದುಗೆ ಏರಿದೆ
ಕಾಯಕವೆ ಕೈಲಾಸ ಎನ್ನುವ ಮಾತು ಕೃತಿಯೊಳು ಮೂಡಿದೆ
ಕಾವಿ ಉಡುಗೆಯನುಟ್ಟು ನಭವೇ ಕಿರಣ ಹಸ್ತವ ಚಾಚಿದೆ
ಎಲ್ಲ ನನ್ನವರೆನ್ನುವ ಭಾವದ ಕರುಣೆಯೇ ಕಣ್ತೆರೆದಿದೆ

ಈ ಕವಿವಾಣಿಯ ಪ್ರತಿಯೊಂದು ಸಾಲುಗಳನ್ನು ವಿಮರ್ಶಿಸಿ ನೋಡಿದಾಗ ಎಷ್ಟು ಸಮಂಜಸವಾಗಿವೆ ಎಂದು ಅರಿವಾಗುತ್ತದೆ.

ಶ್ರೀ ಸಿದ್ಧಗಂಗಾ ಮಠದ ಜವಾಬ್ದಾರಿಯನ್ನು ೧೯೩೦ ರ ದಶಕದಲ್ಲಿ ವಹಿಸಿಕೊಂಡ ನಂತರ ಸುಮಾರು ತೊಂಬತ್ತು ವರ್ಷಗಳ ಸುದೀರ್ಘ ಅವಧಿಯಲ್ಲಿ ಯಾವ ಸದ್ದುಗದ್ದಲವಿಲ್ಲದೆ ಶ್ರೀಗಳು ಮಾನವ ಸಮಾಜಕ್ಕೆ ಸಲ್ಲಿಸಿರುವ ನಿರಂತರ ಸೇವೆ ಒಂದು ಮಹತ್ತರವಾದ ಸಾಧನೆ. ಹೊಗಳಿಕೆ ತೆಗಳಿಕೆಗಳನ್ನೆಲ್ಲ ಮನದಾಚೆಯಲ್ಲಿರಿಸಿ ಲೋಕೋಪಕಾರದ ಕಾಯಕದಲ್ಲೇ ಸದಾ ನಿರತರಾಗಿರುವ ಕಾಯಕಯೋಗಿ ಶ್ರೀಗಳವರು. ಬೆಳಗಿನ ಜಾವ ಸುಮಾರು 2 ಗಂಟೆಗೆ ಎದ್ದು ೩-೪ ತಾಸುಗಳ ಪೂಜಾ ಧ್ಯಾನಾದಿಗಳಿಂದ ಪ್ರಾರಂಭಗೊಂಡು ರಾತ್ರಿ ೧೧ ಗಂಟೆಯವರೆಗಿನ ಶ್ರೀಗಳ ದಿನಚರಿಯು ಪ್ರಾಯದ ತರುಣರನ್ನೂ ಬೆರಗಾಗಿಸುವಂತದ್ದು. ಇಂತಹ ಮಹಾಜೀವವಿರುವ ಪುಣ್ಯಕ್ಷೇತ್ರದಲ್ಲಿ ಇದ್ದುಗೊಂಡು ಶ್ರೀಮಠದ ಇಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಂಗ ಮಾಡಲು ಅವಕಾಶ ಸಿಕ್ಕಿದ್ದು ನನ್ನ ಪುಣ್ಯ. ಆ ನಾಲ್ಕು ವರ್ಷಗಳಲ್ಲಿ ನಾನು ಕಂಡುಕೊಂಡಂತ ಕೆಲವು ಅನುಭವಗಳನ್ನು ಹಂಚಿಕೊಳ್ಳುವ ಪ್ರಯತ್ನ ಇಲ್ಲಿ - ಸಿದ್ಧಗಂಗೆಯ ಒಂದು ನೆನಪು!



೮೦ರ ದಶಕದಲ್ಲಿ ಶ್ರೀ ಮಠದಲ್ಲಿದ್ದ ಇಂಜಿನಿಯರಿಂಗ್ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆ. ನಾನು ಸೇರಿಕೊಂಡ ವರ್ಷದಲ್ಲಿ ಐದೇ ಐದು ಮಂದಿ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಮಠದಲ್ಲಿ ಇದ್ದಿದ್ದು. ಸುಮಾರು ಮೂರು ಸಾವಿರ ವಿದ್ಯಾರ್ಥಿಗಳ ನಡುವೆ 'ಇಂಜಿನಿಯರ್ಸ್' ಎಂದು ನಮಗೆ ವಿಶೇಷ ಗೌರವ ಮತ್ತು ಕೆಲವು ಸವಲತ್ತುಗಳಿದ್ದವು. ಪ್ರತಿದಿನ ಸಂಜೆ ಸಾಮೂಹಿಕ ಪ್ರಾರ್ಥನೆಯಲ್ಲಿ ಗೈರು ಹಾಜರಿಗೆ ಅನುಮತಿ, ಊಟದ ವೇಳೆಯಲ್ಲಿ ಆದ್ಯತೆ, ರಾತ್ರಿಯ ಊಟ ಮಠದ ಶಾಲಾ ಶಿಕ್ಷಕರ ಜೊತೆ ಇತ್ಯಾದಿ.. ಕಠಿಣ ತಾಂತ್ರಿಕ ವಿಷಯಗಳನ್ನು ಅಭ್ಯಾಸ ಮಾಡುವಲ್ಲಿ ಸಹಕಾರಿಕಾರಿಯಾಗಲಿ ಎಂದು ಈ ರೀತಿಯ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಶ್ರೀಗಳ ಯೋಚನೆ ನಮ್ಮ ಮನಸ್ಸಿನಲ್ಲಿ ಪ್ರಾರಂಭದಲ್ಲೇ ಉತ್ತಮ ಪರಿಣಾಮ ಬೀರಿತ್ತು. ಅವರ ದಿನಚರಿಯಂತೂ ನಮಗೆ ಆದರ್ಶಪ್ರಾಯವಾಗಿತ್ತು. ಈಗ ಚಿಂತಿಸಿದರೆ ನಮಗೂ ಸಾಮೂಹಿಕ ಪ್ರಾರ್ಥನೆ ಕಡ್ಡಾಯಮಾಡಿರಬೇಕಿತ್ತು ಅನ್ನಿಸುತ್ತದೆ. ಏಕೆಂದರೆ ಶ್ರೀಗಳ ಸಾಮೀಪ್ಯತೆ, ಪ್ರತಿದಿನ ನೀತಿ ಬೋಧನೆಗಳಿಂದ ನಮಗೆಲ್ಲ ಇನ್ನೂ ಹೆಚ್ಚಿನ ಲಾಭವಾಗುತ್ತಿತ್ತೇನೋ?

ಬೆಳಗಿನ ಜಾವ ಸುಮಾರು ೫.೩೦ರ ಹೊತ್ತಿಗೆ ವಿದ್ಯಾರ್ಥಿಗಳೆಲ್ಲರೂ ಎದ್ದು ತಮ್ಮ ಪಾಠಗಳ ಅಭ್ಯಾಸ ಮಾಡಬೇಕಿತ್ತು. ಅದಕ್ಕೆ ಅನುಗುಣವಾಗಿ ರಾತ್ರಿ ೯.೩೦ - ೧೦ಕ್ಕೆ ಮಲಗುವಂತೆ ಆದೇಶವಿತ್ತು. ರಾತ್ರಿ ಮತ್ತು ಬೆಳಗ್ಗೆ ಸಮಯಕ್ಕೆ ಸರಿಯಾಗಿ ಗಂಟಾನಾದದಿಂದ ವಿದ್ಯಾರ್ಥಿಗಳನ್ನು ಎಚ್ಚರಿಸಲಾಗುತ್ತಿತ್ತು. ಈ ನಿರ್ಬಂಧ ಕೂಡ ನಮಗೆ (ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ) ಅನ್ವಯಿಸಿರಲಿಲ್ಲ. ನನಗೆ ಚಿಕ್ಕಂದಿನಿಂದಲೂ ಬೇಗನೆ ಮಲಗಿ ಬೇಗನೆ ಏಳುವ ಅಭ್ಯಾಸವಾಗಿದ್ದರಿಂದ ಸಿದ್ಧಗಂಗಾ ಮಠಕ್ಕೆ ಚೆನ್ನಾಗಿ ಹೊಂದುಕೊಂಡಿದ್ದೆ. ದೀಕ್ಷಾಪಟುವಾಗಿದ್ದ ನನಗೆ ಸ್ನಾನ ಪೂಜಾದಿಗಳಿಗೂ ಅನುಕೂಲವಾಗಿತ್ತು. ಒಂದು ಅಥವಾ ಎರಡು ವಾರಕ್ಕೊಮ್ಮೆ ಹಳೇಮಠಕ್ಕೆ ಬೆಳಗಿನ ಜಾವದಲ್ಲೇ ಹೋಗಿ ಶ್ರೀಗಳ ಪೂಜೆಯಲ್ಲಿ ಸಂಭ್ರಮದಿಂದ ಭಯಭಕ್ತಿಗಳಿಂದ ಕೂಡಿ ಪಾಲ್ಗೊಳ್ಳುತ್ತಿದ್ದೆವು. ಅಷ್ಟೊತ್ತಿಗಾಗಲೆ ಶ್ರೀಗಳವರು ಸುಮಾರು ೩ ಗಂಟೆಗಳ ಕಾಲ ಧ್ಯಾನವನ್ನು ಮುಗಿಸಿರುತ್ತಿದ್ದರು. ಪೂಜಾಪೀಠದಲ್ಲಿ ಅವರನ್ನು ನೋಡುವುದೇ ಒಂದು ವಿಶಿಷ್ಟವಾದ ಅನುಭವ. ಮರಿಸ್ವಾಮಿಗಳು ಮತ್ತು ಭಕ್ತಾದಿಗಳು ಸೇರಿ ಒಕ್ಕೊರಲಿಂದ ಹಾಡುತ್ತಿದ್ದ ಹಾಡುಗಳನ್ನು ನೆನೆಸಿಕೊಂಡರೆ ಈಗಲೂ ಮೈ ರೋಮಾಂಚನಗೊಳ್ಳುತ್ತದೆ. ಅಲ್ಲಿ ಹಾಡುತ್ತಿದ್ದ ಗುರುಕರುಣ ತ್ರಿವಿಧಿ ನನಗೆ ಅತ್ಯಂತ ಇಷ್ಟವಾಗಿತ್ತು.

"ಶ್ರೀಗುರುವೇ ಸತ್ ಕ್ರೀಯೆ ಆಗರವೇ ಸುಜ್ಞಾನ ಸಾಗರವೇ ಎನ್ನ ಮತಿಗೆ ಮಂಗಳವಿತ್ತು ರಾಗದಿಂ ಬೇಗ ಕೃಪೆಯಾಗು"

"ನ ಗುರೋರಧಿಕವೆಂದು ಜಗದಲ್ಲಿ ಸಾರುತಿಹ ನಿಗಮ ಶೃತಿ ಕೇಳಿ ಗುರುವೇ ನಾ ನಿಮ್ಮ ಪದಯುಗವ ಬಣ್ಣಿಪೆನು ಕೃಪೆಯಾಗು"

"ಶಿಲೆಯ ತೆಪ್ಪವನೇರಿ ಜಲವ ದಾಂಟುವೆನೆಂಬ ಬಲುಮೂಢತನವ ತೊಲಗಿಸಿ ನೀನೆನ್ನ ಸಲಹು ಶ್ರೀಗುರುವೇ ಕೃಪೆಯಾಗು"

ಶ್ರೀಗಳು ಸರಳವಾದ ಆಹಾರವನ್ನು ಸ್ವಲ್ಪ ಪ್ರಮಾಣದಲ್ಲಿ ಸ್ವೀಕರಿಸುತ್ತಿದ್ದರು. ಮತ್ತೆ ಮಧ್ಯಾಹ್ನ ಪೂಜೆಯವರೆಗೂ ಏನೂ ಇಲ್ಲ! ಈ ರೀತಿಯ ಶಿಸ್ತಿನ ದಿನಚರಿಯೇ ಅವರ ದೀರ್ಘವಯಸ್ಸು, ಆರೋಗ್ಯ ಮತ್ತು ಚಟುವಟಿಕೆಗಳ ಗುಟ್ಟು. ಪೂಜೆಯ ನಂತರ ಗುರುಗಳ ಪಾದೋದಕ-ಪ್ರಸಾದ ಸ್ವೀಕರಿಸಿ ಹೊರಬರುವಾಗ ನಾವೆಷ್ಟು ಧನ್ಯರು ಎಂಬ ಭಾವನೆ ಮನದುಂಬುತ್ತಿತ್ತು. ಶ್ರೀಗಳು ಪೂಜೆಯ ನಂತರ ಹಳೇಮಠದಿಂದ ಪಾದುಕೆಯನ್ನು ಧರಿಸಿ ಪಟಪಟ ಶಬ್ದ ಮಾಡುತ್ತ ತಮ್ಮ ಕಚೇರಿ್ಗೆ ನಡೆದು ಬರುವಾಗ ಸೂರ್ಯನು ಆಗ ತಾನೇ ಉದಯಿಸಿ ಮಠದ ಅಂಗಳವನ್ನು ತನ್ನ ಕಿರಣಗಳಿಂದ ತೊಳೆಯುತ್ತಿದ್ದ ದೃಶ್ಯವು ಮನೋಹರವಾಗಿರುತ್ತಿತ್ತು. ದಾರಿಯ ಅಕ್ಕ ಪಕ್ಕದಲ್ಲಿ ಜಗಲಿ ಮೆಟ್ಟಿಲುಗಳಮೇಲೆ ಓದುತ್ತಿರುವ ವಿದ್ಯಾರ್ಥಿಗಳನ್ನು ಒಮ್ಮೊಮ್ಮೆ ಮಾತನಾಡಿಸುತ್ತ, ಪ್ರಶ್ನೆಗಳನ್ನು ಕೇಳುತ್ತ, ಉತ್ತೇಜಿಸಿ, ಅವರ ಮುಖದಲ್ಲಿ ನಗೆಹರಿಸಿ ಶ್ರೀಗಳವರು ಮುಂದೆ ಸಾಗುತ್ತಿದ್ದರು. ಪರೀಕ್ಷೆವೇಳೆಯಾಗಿದ್ದಲ್ಲಿ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಪಾಠ ಮಾಡುತ್ತಿದ್ದರು! ನಂತರ ಕಛೇರಿಯ ಹತ್ತಿರ ಕಾಯುತ್ತಿದ್ದವರಿಗೆ ದರ್ಶನವಿತ್ತ ಕಛೇರಿಯ ಎದುರಿಗೆ ಮಂಚದ ಮೇಲೆ ಕುಳಿತು ಸುತ್ತಮುತ್ತಲ ಹಳ್ಳಿಗಳಿಂದ ಬಂದ ರೈತ ಕುಟುಂಬಗಳ ಕಷ್ಟಸುಖಗಳನ್ನು ಆಲಿಸುತ್ತಿದ್ದರು. ಮಳೆ ಬೆಳೆಗಳ ಬಗ್ಗೆ ವಿಚಾರಿಸುತ್ತ ಯಂತ್ರ, ರುದ್ರಾಕ್ಷಿಮಾಲೆಗಳನ್ನು ಆಶೀರ್ವದಿಸಿ ಕೊಡುತ್ತಿದ್ದರು. ಎಲ್ಲರಿಗೂ ಪ್ರಸಾದ (ಭೋಜನ) ಮಾಡಿಹೋಗಲು ಹೇಳುತ್ತಿದ್ದರು. ಆಗಿನ ಕಾಲದಲ್ಲೇ ಪ್ರತಿದಿನ ಸುಮಾರು ೫ ಸಾವಿರಕ್ಕೂ ಹೆಚ್ಚು ಜನ ಶ್ರೀ ಮಠದ ಅನ್ನ ದಾಸೋಹದಲ್ಲಿ ಊಟ ಮಾಡುತ್ತಿದ್ದರು! ನಡು ನಡುವೆ ಶ್ರೀಗಳು ಉಗ್ರಾಣಕ್ಕೆ ಭೇಟಿ ಕೊಟ್ಟು ಅಡುಗೆ ಕಾರ್ಯಗಳು ಸುಗಮವಾಗಿ ನಡೆದಿದೆಯೇ ಎಂದು ವಿಚಾರಿಸುತ್ತಿದ್ದರು. ಹಾಗೆ ಮಠದ ಸುತ್ತಲಿದ್ದ ಹೊಲಗಳಲ್ಲಿ ನಡೆದಾಡುತ್ತ ಪ್ರಕೃತಿಯ ಮಡಿಲಲ್ಲಿ ಬೆಳೆಗಳು ಹೇಗಿವೆಯೆಂದು ನೋಡುತ್ತಿದ್ದರು. ಈ ಮಧ್ಯೆ ಸುತ್ತಮುತ್ತಲ ಗ್ರಾಮ, ನಗರಗಳಲ್ಲಿ ಬಿನ್ನಹಗಳನ್ನು ಸ್ವೀಕರಿಸಿ ಪಾದಪೂಜಾದಿಗಳನ್ನು ನಡೆಸಿಕೊಡುತ್ತ ಭಕ್ತಜನಗಳ ಮನದಲ್ಲಿ ಸಂತಸವನ್ನುಂಟು ಮಾಡುತ್ತಿದ್ದುದು ನಿತ್ಯದ ದೃಶ್ಯವಾಗಿತ್ತು. ಬಿಡುವಿಲ್ಲದೇ ಈ ರೀತಿ ಒಂದಲ್ಲ ಒಂದು ಕಾಯಕದಲ್ಲಿ ಸದಾ ನಿರತರಾಗಿದ್ದ ಶ್ರೀಗಳವರನ್ನು ನೋಡುವುದೊಂದು ಸೋಜಿಗವಲ್ಲದೇ ಮತ್ತೇನು?. ಸ್ವಾಮೀಜಿಯವರ ಏಕಾಗ್ರತೆ ಮತ್ತು ಜ್ಞಾಪಕಶಕ್ತಿ ಅಸಾಧಾರಣವಾದದ್ದು. ಭೂಮಿಯಷ್ಟು ಕ್ಷಮತೆ ಮತ್ತು ವಿಶಾಲ ಹೃದಯವಂತಿಕೆ. ಭಕ್ತ ಜನಗಳು ಪ್ರೀತಿಯಿಂದ ಸ್ವಾಮೀಜಿಯವರನ್ನು 'ನಡೆದಾಡುವ ದೇವರು', 'ಕಲಿಯುಗದ ದೇವರು', 'ಆಧುನಿಕ ಬಸವಣ್ಣ' ಮುಂತಾದ ಬಿರುದುಗಳಿಂದ ಕರೆಯುತ್ತಾರೆ.

(ಮುಂದಿನ ಪುಟಕ್ಕೆ...)


Copyright © KCO – Brindavana

....ಹಿಂದಿನ ಪುಟದಿಂದ

ಹಳೇಮಠದಲ್ಲಿ ಅನೇಕ ಸನ್ಯಾಸಿ ವಟುಗಳಿದ್ದರು. ಅವರೆಲ್ಲರೂ ಬೇರೆ ಬೇರೆ ಮಠಗಳಿಗೆ ಪೀಠಾಧಿಪತಿಗಳಾಗಿ ನಿಯೋಜಿತರಾಗಿದ್ದು ಸಂಸ್ಕೃತ ಮತ್ತು ವೇದಾಧ್ಯಯನಕ್ಕೋಸ್ಕರ ಶ್ರೀಮಠದಲ್ಲಿ ಇದ್ದು ಹಲವಾರು ವರ್ಷಗಳ ಕಾಲ ವ್ಯಾಸಂಗ ಮಾಡುತ್ತಿದ್ದರು. ಇವರಿಗೆಂದೇ ವಿಶೇಷವಾಗಿ ಯೋಗಾಭ್ಯಾಸಕ್ಕಾಗಿ ಒಬ್ಬ ಯೋಗ ಗುರುಗಳನ್ನು ಶ್ರೀಗಳು ನಿಯೋಜಿಸಿದ್ದರು. ನಾನೂ ಸಹ ಆ ಗುರುಗಳಿಂದ ಒಂದೆರಡು ವರ್ಷ ಸನ್ಯಾಸಿವಟುಗಳ ಜೊತೆ ಯೋಗಶಿಕ್ಷಣ ಪಡೆಯಲು ಅವಕಾಶ ಸಿಕ್ಕಿದ್ದು ನನ್ನ ಅದೃಷ್ಟ. ದೇಹ ಮತ್ತು ಮನಸ್ಸುಗಳ ಆರೋಗ್ಯದ ಪ್ರಾಮುಖ್ಯತೆಯನ್ನು ಶ್ರೀಗಳು ಬಾಲ್ಯದಲ್ಲೇ ಕಂಡುಕೊಂಡಂತಿದೆ. ಅದೇ ರೀತಿ ಸಜ್ಜನರ ಸಹವಾಸ ನಮ್ಮ ಬೆಳವಣಿಗೆಗೆ ಅತಿ ಮುಖ್ಯ ಎಂದು ಮನಗಂಡಿದ್ದರು. ದುಶ್ಚಟಗಳಿಂದ ದೂರವಿರುವಂತೆ ವಿದ್ಯಾರ್ಥಿಗಳನ್ನು ಯಾವಾಗಲೂ ಎಚ್ಚರಿಸುತ್ತಿದ್ದರು. ನಮ್ಮ ಕೊಠಡಿಯಲ್ಲೇ ಆದ ಒಂದು ಘಟನೆ! ಅಂದು ರಜಾದಿನವೋ ಅಥವಾ ಭಾನುವಾರವೋ ಇರಬೇಕು. ನಮ್ಮ ಕೊಠಡಿಯಲ್ಲಿದ್ದ ಸೀನಿಯರ್ ಇಂಜಿನಿಯರಿಂಗ್ ವಿದ್ಯಾರ್ಥಿ ಒಬ್ಬನಿಗೆ ಸಿಗರೇಟ್ ಸೇದುವ ಚಟವಿತ್ತು. ಪಕ್ಕದಲ್ಲೇ ಇದ್ದ ಕ್ಯಾತಸಂದ್ರದಿಂದ ಕೆಲವು ಸ್ನೇಹಿತರನ್ನು ಸೇರಿಸಿಕೊಂಡು ಸಿಗರೇಟ್ ಸೇದುತ್ತ ಹರಟೆ ಹೊಡೆಯುತ್ತಿದ್ದರು. ನನ್ನಂತಹ ಜೂನಿಯರ್ ವಿದ್ಯಾರ್ಥಿಯ ಅಭಿಪ್ರಾಯ - ವೇದನೆಗಳನ್ನು ಕೇಳುವಂತಹ ಸಂಯಮ ಇರಲಿಲ್ಲ. ಕೇಳಿದರೂ ಕಡೆಗಣಿಸುವಂತಹ ಅಹಂಭಾವ. ಇದ್ದಕ್ಕಿದ್ದಂತೆ ಪಾದುಕೆಗಳ ಶಬ್ದ. ಬಾಗಿಲು ತೆರೆಯಿತು - ನೋಡಿದರೆ ಸ್ವಾಮೀಜಿಯವರು! ಒಳಗೆ ಬಂದು ತಮ್ಮ ದೃಷ್ಟಿಯನ್ನು ಕೊಠಡಿಯ ಸುತ್ತ ಹಾಯಿಸಿದರು. ಕ್ಷಣಮಾತ್ರದಲ್ಲೇ ಸೀನಿಯರ್ ಒಳಗೊಂಡು ಧೂಮಪಾನ ಮಾಡುತ್ತಿದ್ದ ಎಲ್ಲರೂ ಪರಾರಿ! ಶ್ರೀಗಳು ಉಳಿದವರನ್ನೂ ಆಚೆಗೆ ಕಳುಹಿಸಿ ನಮ್ಮ ರೂಮಿಗೆ ಬೀಗ ಹಾಕಿಸಿದರು. ಒಬ್ಬ ಮಾಡಿದ ತಪ್ಪಿಗೆ ಎಲ್ಲರಿಗೂ ಶಿಕ್ಷೆಯಾಯ್ತು. ಮಠದ ಆವರಣದಲ್ಲಿ (ವಿದ್ಯಾರ್ಥಿ ಕೊಠಡಿ) ಧೂಮಪಾನ ಮಾಡಿದವರಿಗೂ, ಅದನ್ನು ಪ್ರತಿಭಟಿಸಿ ಮೇಲ್ವಿಚಾರಕರಿಗೆ ತಿಳಿಸದಿದ್ದ ನಮಗೂ ಎಚ್ಚರಿಕೆ ಕೊಡಲಾಯ್ತು. ಸಂಜೆಯವರೆಗೂ ಆಚೆಯಿರಿಸಿ, ರಾತ್ರಿ ಊಟದ ವೇಳೆಗೆ ಕ್ಷಮಿಸಿ ಬೀಗ ತೆರೆಸಿದರು! ಆ ನಂತರ ನಮ್ಮ ರೂಮಿನಲ್ಲಿ ಧೂಮಪಾನ ಆದ ನೆನಪಿಲ್ಲ. ಶ್ರೀಗಳು ಖುದ್ದಾಗಿ ನಮ್ಮ ಕೊಠಡಿಗೆ ಬಂದು ಕೆಡುತ್ತಿದ್ದ ವಾತಾವರಣವನ್ನು ತಿಳಿಯಾಗಿಸಿದ ಈ ಘಟನೆ ವಿದ್ಯಾರ್ಥಿಗಳ ಮೇಲಿದ್ದ ಅವರ ಕಾಳಜಿಯ ನಿದರ್ಶನವಾಗಿದೆ.

ಶ್ರೀ ಮಠದಲ್ಲಿ ಪ್ರತಿವರ್ಷವೂ ಸುಗ್ಗಿಯ ನಂತರ ನಡೆಯುವ ಜಾತ್ರೆ ಮತ್ತು ವಸ್ತುಪ್ರದರ್ಶನ ನಾವು ಕಾಣುತ್ತಿದ್ದ ಸಂಭ್ರಮದ ದಿನಗಳು. ದೂರದ ಊರುಗಳಿಂದ ರೈತರು ತಮ್ಮ



ಎತ್ತುಗಳನ್ನು ಸಿಂಗರಿಸಿ ಕರೆತರುತ್ತಿದ್ದರು. ರಸ್ತೆಯ ಅಕ್ಕ ಪಕ್ಕದಲ್ಲೆಲ್ಲ (ನಮ್ಮ ರೂಮಿನ ಮುಂದೆಯೂ) ಕಡ್ಲೆಪುರಿ ಮಿಠಾಯಿ ಮುಂತಾದವುಗಳ ಅಂಗಡಿಗಳ ಸಾಲು ಸಾಲು. ಶಿವರಾತ್ರಿಯ ನಂತರದ ದಿನದಲ್ಲಿ ನಡೆಯುವ ಸಿದ್ಧಲಿಂಗೇಶ್ವರರ ತೇರು. ಇದರಲ್ಲಿ ಲಕ್ಷಾಂತರ ಜನ ಭಾಗವಹಿಸುತ್ತಿದ್ದರು. ಹಲವಾರು ಊಟದ ಕೊಪ್ಪಲುಗಳಲ್ಲಿ ಅನ್ನ ದಾಸೋಹ ನಡೆಯುತ್ತಿತ್ತು. ಊಟದ ಸಮಯದಲ್ಲಿ ಶ್ರೀಗಳು ಒಂದು ಕೊಪ್ಪಲಿಂದ ಇನ್ನೊಂದಕ್ಕೆ ಹೋಗುತ್ತ ಎಲ್ಲವೂ ಸರಿಯಾಗಿ ನಡೆಯುತ್ತಿದೆಯೇ ಎಂದು ಖುದ್ದಾಗಿ ವೀಕ್ಷಿಸುತ್ತಿದ್ದರು. ಆ ವಯಸ್ಸಿನಲ್ಲೂ ಅವರಿಗಿದ್ದ ಹುಮ್ಮಸ್ಸು, ಬಲ, ಸಾಮರ್ಥ್ಯಗಳನ್ನು ಕಂಡು ಆಶ್ಚರ್ಯಪಟ್ಟೆವು. ಸಿದ್ದಗಂಗೆಯ ಇನ್ನೊಂದು ನೆನಪೆಂದರೆ 'ಬಸವ ಜಯಂತಿ' ಕಾರ್ಯಕ್ರಮಗಳು. ಈ ಸಂಬಂಧವಾಗಿ ಅನೇಕ ಗ್ರಾಮಗಳಲ್ಲಿ"ಬಸವ ಜಯಂತಿ' ಆಚರಿಸುತ್ತಾ ಬಸವಾದಿ ಶರಣರ ಆದರ್ಶ, ವಚನಧಾರೆ ಮತ್ತು ತತ್ವಗಳನ್ನು ಹರಡುವಲ್ಲಿ ಶ್ರೀಗಳ ಪಾತ್ರ ಅತ್ಯಂತ ಶ್ಲಾಘನೀಯ. ಒಂದು ಆಕರ್ಷಣೆಯೆಂದರೆ ಎಲ್ಲ 'ಬಸವ ಜಯಂತಿ' ಕಾರ್ಯಕ್ರಮಗಳೂ 'ಬಸವೇಶ್ವರ' ನಾಟಕದಿಂದ ಮುಕ್ತಾಯ. ಶ್ರೀ ಮಠದ ಶಾಲಾ ಶಿಕ್ಷಕರೇ ಪಾತ್ರಧಾರಿಗಳು. ನಾಟಕ ರಾತ್ರಿಯಿಡೀ ನಡೆಯುತ್ತದೆ. ವಿಶೇಷವೆಂದರೆ ಪ್ರತಿಸಲ ಶ್ರೀಗಳು ಕುಳಿತು ನಾಟಕ ವೀಕ್ಷಿಸುತ್ತಿದ್ದುದು! ಇದರಿಂದ ಕಲಾವಿದರಿಗೆ ಅತ್ಯಂತ ಹೆಚ್ಚಿನ ಪ್ರೋತ್ಸಾಹ ಸಿಗುತ್ತಿತ್ತು. ಶ್ರೀಗಳ ಆಶೀರ್ವಚನ ಕೇಳಲು ಮತ್ತು 'ಬಸವೇಶ್ವರ' ನಾಟಕ ನೋಡಲು ಸಾವಿರಾರು ಮಂದಿ ಉತ್ಸಾಹದಿಂದ ಸೇರುತ್ತಿದ್ದರು. ಬಂದವರಿಗೆಲ್ಲ ಅನ್ನ ದಾಸೋಹವನ್ನು ಏರ್ಪಡಿಸಲಾಗುತ್ತಿತ್ತು.

ಇಂತಹ ಅನೇಕ ಅನುಭವಗಳನ್ನು ಹಂಚಿಕೊಳ್ಳಬಹುದಾದ ಕೋಟ್ಯಾಂತರ ಜೀವಿಗಳಿಗೆ ಆದರ್ಶಪ್ರಾಯರಾಗಿ ಪ್ರೇರಣೆ ನೀಡಿರುವ, ನೀಡುತ್ತಿರುವ ಶ್ರೀ ಸಿದ್ಧಗಂಗಾ ಮಠಾಧ್ಯಕ್ಷ ಶ್ರೀ ಶಿವಕುಮಾರ ಸ್ವಾಮೀಜಿಯವರು ಈ ಯುಗ ಕಂಡಂತಹ ಒಬ್ಬ 'ಸಿದ್ಧ ಪುರುಷ' ಎನ್ನುವಲ್ಲಿ ಯಾವುದೇ ಉತ್ಪ್ರೇಕ್ಷೆ ಇಲ್ಲ!.೧೧೦ ವರ್ಷಗಳ ಸಾರ್ಥಕ ಜೀವನ ನಡೆಸಿರುವ ಶ್ರೀಗಳವರ ಕಾಯಕನಿಷ್ಠೆ, ಶಿಸ್ತಿನ ದಿನಚರಿ, ನಿಸ್ವಾರ್ಥ ಸೇವೆ, ತಪಸ್ಸು ನಮಗೆಲ್ಲ ಸದಾ ಸ್ಫೂರ್ತಿದಾಯಕವಾಗಿರಲಿ ಎಂದು ಆಶಿಸಿ, ಅವರ ಪಾದಕಮಲಗಳಿಗೆ ಹೃತ್ಪೂರ್ವಕ ಪ್ರಣಾಮಗಳನ್ನು ಸಮರ್ಪಿಸುತ್ತೇವೆ.





Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಕಥಾ ಸಮಯ

### ಒಂದೆ ತಾನಿನ ತಾನು



ಸರಿತಾ ನವಲಿ

"ಸುಮಿ, ತಾತ ವಾಕಿಂಗ್ ಹೋದ್ರಾ? ಇನ್ನೊಂದು ಕಪ್ ಕಾಫಿ ಬೇಕೂಂತ ಕೇಳಿದ್ರು." ಅಡುಗೆ ಮನೆಯಿಂದಲೇ ಮನೆ ಮುಂದಿನ ಗೇಟಿನ ಶಬ್ದ ಕೇಳಿಸಿಕೊಂಡ ಅಮ್ಮ ಕೂಗಿದಾಗ, ಡ್ರಾಯಿಂಗ್ ರೂಮಿನ ಸೋಫಾದಲ್ಲಿ ಕುಳಿತಿದ್ದ ಸುಮಾ, "ಹೋಗಿದ್ದಾರಮ್ಮ, ಪೇಪರ್ ಓದ್ತಾ ಇದ್ದೋರು, ಏನೋ ನೆನಪು ಮಾಡಿಕೊಂಡು ಎದ್ದು ಹೋದ್ರು" ಎಂದು ಹೇಳಿ ಅವತ್ತಿನ ದಿನಪತ್ರಿಕೆಯನ್ನು ಕೈಗೆತ್ತಿಕೊಂಡು ಪುಟಗಳನ್ನು ತಿರುವಿಹಾಕಿದಳು. ಶಾಲೆಯ ಬಸ್ಸಿಗಾಗಿ ಕಾಯುತ್ತ ಕುಳಿತಿದ್ದ ಅವಳ ತಮ್ಮ ಆದಿತ್ಯ, ಟಿವಿಯ ರಿಮೋಟ್ ಹಿಡಿದು ಚಾನೆಲ್ ಗಳನ್ನು ಬದಲಾಯಿಸುವುದರಲ್ಲೇ ವೇಳೆ ಕಳೆಯುತಿದ್ದ. ಕ್ಷಣ ಕ್ಷಣಕ್ಕೊಮ್ಮೆ ಬೇರೆ ಬೇರೆಯಾಗಿ ಧ್ವನಿಸುತಿದ್ದ ಟಿವಿಯತ್ತ ನೋಡಿದ ಸುಮಾ, "ಆದಿತ್ಯ, ಬರೀ ಚಾನೆಲ್ ಬದಲಾಯಿಸೋದು ಬಿಟ್ಟು ಯಾವುದಾದರೂ ಒಂದು ಚಾನೆಲ್ ನೋಡ್ಬಾರ್ದಾ?" ಎಂದಳು. ಅದಕ್ಕೆ ಉತ್ತರವಾಗಿ ಆದಿತ್ಯ, "ನೀನೂ ಅಷ್ಟೆ, ಪೇಪರಿನ ಪೇಜ್ ತಿರುಗಿಸೋದು ಬಿಟ್ಟು ಏನಾದರೂ ಓದು" ಎಂದ. "ಏ, ಸ್ಕೂಲಿಗೆ ಹೋಗೋ ತಲೆಹರಟೆ" ಎಂದ ಸುಮಾ ಒಳಗೆದ್ದು ಹೋದಳು.

ಸುಮಾಳ ಕಾಲೇಜಿನ ಡಿಗ್ರಿ ಕೊನೆಯ ವರ್ಷದ ವಿದ್ಯಾರ್ಥಿಗಳಿಗೆ ಅಂದು 'ಬೀಳ್ಕೊಡುಗೆ ಸಮಾರಂಭ'ವನ್ನು ಏರ್ಪಡಿಸಿದ್ದರು. ಅವಳು ಹಿಂದಿನ ದಿನವೇ ಗ್ರೀಟಿಂಗ್ ಕಾರ್ಡುಗಳನ್ನು, ಚಾಕಲೇಟುಗಳನ್ನು, ಕೆಂಪು, ಹಳದಿ ಬಣ್ಣದ ಗುಲಾಬಿ ಹೂವಿನ ಗುಚ್ಛಗಳನ್ನು ತಂದಿಟ್ಟುಕೊಂಡಿದ್ದಳು. ಚಾಕಲೇಟುಗಳನ್ನು ಆದಿತ್ಯನ ಕೈಗೆ ಸಿಗದಂತೆ ತನ್ನ ಕೋಣೆಯಲ್ಲಿ ಮುಚ್ಚಿಟ್ಟು, ಗುಲಾಬಿ ಹೂವುಗಳನ್ನು ಪುಟ್ಟ ಬಕೆಟ್ಟಿನ ನೀರಿನಲ್ಲಿಟ್ಟಿದ್ದಳು. ಆ ಗುಚ್ಛದಲ್ಲಿನ ಒಂದೆರಡು ಮೊಗ್ಗಗಳು ಅರಳಿರಬಹುದೆಂದು ನೋಡಲು ಒಳಗೆ ಹೋದ ಸುಮಾಳಿಗೆ ಬಕೆಟ್ಟಿನಲ್ಲಿದ್ದ ಕೆಂಪು ಗುಲಾಬಿಯ ಗುಚ್ಛವೊಂದು ಕಾಣೆಯಾಗಿದ್ದು ಕಂಡು ಆಶ್ಚರ್ಯವಾಗಿತ್ತು. ಇತ್ತೀಚೆಗೆ ಆದಿತ್ಯನಿಗೆ **Facebook** ನಲ್ಲಿ ಹೆಚ್ಚು, ಹೆಚ್ಚು ಹುಡುಗಿಯರೇ ಫ್ರೆಂಡ್ ಆಗಿದ್ದು ನೆನಪಾಗಿ ಅವನ ಮೇಲೆಯೇ ಅನುಮಾನ ಬಂದಿತ್ತು. ಹೊರಗೋಡಿಬಂದು ಕೇಳಬೇಕೆನ್ನುವಷ್ಟರಲ್ಲಿ ಆದಿತ್ಯ ಬಸ್ ಹತ್ತಿ ಶಾಲೆಗೆ ತೆರಳಿದ್ದ. ಕೋಪಗೊಂಡು ಮೆಟ್ಟಿಲು ಹತ್ತಿ ಕೋಣೆಯ ಕಡೆ ಹೊರಟ ಸುಮಾ ಅಡುಗೆ ಮನೆಯಿಂದ ಕೇಳಿಬಂದ ಅಮ್ಮನ ಕೂಗನ್ನೂ ಕೇಳಿಸಿಕೊಳ್ಳಲಿಲ್ಲ. ಆಗ ಅಜ್ಜಿ-ತಾತನ ಕೋಣೆಯ ಅರ್ಧ ತೆರೆದ ಬಾಗಿಲಿನಿಂದ ಒಳಗಿದ್ದ ಟೇಬಲ್ ಮೇಲೆ ಕೆಂಪು ಗುಲಾಬಿಯ ಗುಚ್ಛ ಸುಮಾಳ ಕಣ್ಣಿಗೆ ಬಿತ್ತು! ಅಚ್ಚರಿಗೊಂಡು ಬಾಗಿಲನ್ನು ಸದ್ದಾಗದಂತೆ ತಳ್ಳಿ ಒಳಗೆ ಹೋದಳು ಸುಮಾ. ಟೇಬಲ್ಲಿನ ಪಕ್ಕದಲ್ಲಿದ್ದ ಮಂಚದ ಮೇಲೆ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದ ಅವಳ ಅಜ್ಜಿ ಸುಮಿತ್ರಾ ಮಲಗಿದ್ದರು. ಅಜ್ಜಿಯ ತಲೆಸವರಿ, ಹೊದಿಕೆ ಸರಿಪಡಿಸಿ ಮೇಜಿನತ್ತ ತಿರುಗಿದಾಗ, ಹೂ ಗುಚ್ಛದ ಪಕ್ಕದಲ್ಲಿ ಡೈರಿಯೊಂದು ಕಂಡಿತ್ತು. ಮೊದಲನೆ ಪುಟದಲ್ಲಿ 'ಶ್ಯಾಮರಾವ್' ಎಂದು ಅವಳ ತಾತನ ಹೆಸರು ಬರೆದಿದ್ದ ಆ ಡೈರಿಯ ಮುಂದಿನ ಪುಟವನ್ನು ಕುತೂಹಲದಿಂದ ತಿರುಗಿಸುವ ಮುನ್ನ "ತಾತನ ಡೈರಿಯನ್ನು ಓದುವುದು ಸರಿಯೇ?" ಎಂದು ತನ್ನನ್ನೇ ಪ್ರಶ್ನಿಸಿಕೊಂಡ ಸುಮಾ, ಒಂದೆರಡು ಕ್ಷಣ ತಡೆದು, "ನಾನು ತಾತನ ಮುದ್ದಿನ ಮೊಮ್ಮಗಳಲ್ಲವೇ" ತಾನೇ ಉತ್ತರಿಸಿಕೊಂಡು, ನಿದ್ರಿಸುತ್ತಿದ್ದ ಅಜ್ಜಿಯನ್ನು ಒಮ್ಮೆ ನೋಡಿ ಪಕ್ಕದಲ್ಲಿದ್ದ ಕುರ್ಚಿಯಲ್ಲಿ ಕುಳಿತು ಡೈರಿಯನ್ನು ಓದಲು ಪ್ರಾರಂಭಿಸಿದಳು. ಆ ಡೈರಿಯಲ್ಲಿದ್ದ ಶ್ಯಾಮರಾವ್ ಮತ್ತು ಸುಮಿತ್ರಾರ ಬದುಕಿನ ಪುಟಗಳು ಸುಮಾಳ ಮುಂದೆ ತೆರೆದಿಟ್ಟುಕೊಂಡವು.

ಸಂಬಂಧಿಯೊಬ್ಬರ ಮದುವೆಯಲ್ಲಿ ಹುಡುಗನ ಕಡೆಯವರ ಗುಂಪಿನಲ್ಲಿ ಸುಮಿತ್ರಾರನ್ನು ನೋಡಿದ ಶ್ಯಾಮರಾಯರ ತಾಯಿ ಗೋದೂಬಾಯಿ, ಅವರ ಮನೆಯ ಹಿರಿಯರಲ್ಲಿ ಮಾತುಕತೆ ಮುಂದುವರೆಸಿ ಶ್ಯಾಮರಾವ್ ಮತ್ತು ಸುಮಿತ್ರಾರ ಮದುವೆಯನ್ನು ನಿಶ್ಚಯಿಸಿದರು. ಮದುವೆಯ ಎಲ್ಲ ಕಾರ್ಯಗಳನ್ನು ಸಾಂಗೋಪಾಂಗವಾಗಿ ನೆರವೇರಿಸಿ ಸುಮಿತ್ರಾರನ್ನು ಸೊಸೆಯಾಗಿ ಮನೆ ತುಂಬಿಸಿಕೊಂಡಾಗ ಗೋದೂಬಾಯಿಯ ಮೇಲಿದ್ದ ದೊಡ್ಡದೊಂದು ಜವಾಬ್ದಾರಿ ಕಳೆದಂತಾಯಿತು. ಸರಕಾರಿ ಕಛೇರಿಯಲ್ಲಿ ಗುಮಾಸ್ತರಾಗಿದ್ದ ಶ್ಯಾಮರಾಯರ ಪತ್ನಿಯಾಗಿ ಸಂಸಾರ ಆರಂಭಿಸಿದ ಸುಮಿತ್ರಾ, ಇಚ್ಛೆಯನ್ನು ಪತಿಯಲ್ಲಿ ವ್ಯಕ್ತಪಡಿಸಿ, ಶ್ಯಾಮರಾವ್ ಇಲ್ಲವೆನ್ನದೇ ಪ್ರೋತ್ಸಾಹಿಸಿದಾಗ ಸುಮಿತ್ರಾರ ಆನಂದಕ್ಕೆ ಪಾರವೇ ಇರಲಿಲ್ಲ. (ಗೋದೂಬಾಯಿ ಮನಃಪೂರ್ವಕವಾಗಿ ಸಮ್ಮತಿಸಲಿಲ್ಲ) ಸುಮಿತ್ರಾ ಮನೆಗೆಲಸ, ಅತ್ತೆಯ ಮೆಚ್ಚುಗೆಗಳಿಸುವ ಕಸರತ್ತಿನಲ್ಲಿಯೇ ಬಿ.ಎ. ಕಟ್ಟಿ ಪಾಸು ಮಾಡಿದಾಗ ಶ್ಯಾಮರಾಯರಿಗೆ ಪತ್ನಿಯ ಬಗ್ಗೆ ಹೆಮ್ಮೆಯೆನಿಸಿತು. ನೌಕರಿ ಮಾಡಲು ಅತ್ತೆಯ ನಕಾರವಿದ್ದುದರಿಂದ ಮಕ್ಕಳ ಲಾಲನೆ ಪಾಲನೆಯಲ್ಲಿ ತೊಡಗಿ, ಅಕ್ಕ- ಪಕ್ಕದ ಮನೆಯ ಮಕ್ಕಳಿಗೆ ಪಾಠ ಹೇಳಿಕೊಂಡು, ಕಸೂತಿ-ಹೆಣಿಕೆ ಕಲಿಸಿಕೊಟ್ಟು ಸಂಸಾರದ ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ಆಸರೆಯಾದರು ಸುಮಿತ್ರಾ. ತಿಂಗಳ ಕೊನೆಯಲ್ಲಿ ಶ್ಯಾಮರಾಯರ ಕೈ ಖಾಲಿಯಾಗಿ, ಬೆಳಿಗ್ಗೆ ಕಛೇರಿಗೆ ಹೊರಡುವ ಹೊತ್ತಿನಲ್ಲಿ ಶರ್ಟಿನ ಜೇಬಿನಲ್ಲಿರುತ್ತಿದ್ದ ಅಲ್ಪ ಸ್ವಲ್ಪ ಹಣವನ್ನು ಕಂಡಾಗ ಶ್ಯಾಮರಾಯರು ಪತ್ನಿಯತ್ತ ನೋಡಿ ಮನದಲ್ಲಿಯೇ ಧನ್ಯವಾದ ಹೇಳುತ್ತಿದ್ದರು.

ಎರಡನೇ ಮಗುವಿನ ಬಾಣಂತಿ ಸುಮಿತ್ರಾ, ರಚ್ಚೆ ಹಿಡಿದು ಅಳುವ ಮಗುವನ್ನು ಸಮಾಧಾನಿಸಲು ರಾತ್ರಿಯೆಲ್ಲ ಎಚ್ಚರವಾಗಿದ್ದು ಕಷ್ಟಪಡುತ್ತಿದ್ದುದನ್ನು ನೋಡಿದ ಶ್ಯಾಮರಾಯರು ತಾವೇ ರಾತ್ರಿ ಎಚ್ಚರವಾಗಿದ್ದು ಮಗುವನ್ನು ನೋಡಿಕೊಳ್ಳಲು ಪ್ರಾರಂಭಿಸಿದರು. ಇದೇ ರೂಢಿಯನ್ನು ಉಪಯೋಗಿಸಿಕೊಳ್ಳುವ ವಿಷಯವಾಗಿ ಯೋಚಿಸಿದ ಸುಮಿತ್ರಾ, ಪತಿಗೆ ಇಲಾಖೆಯ ಪರೀಕ್ಷೆಗಳನ್ನು ಬರೆಯುವ ಸಲಹೆ ನೀಡಿದರು. ತಮ್ಮ ಪರಿಶ್ರಮಕ್ಕೆ ಪ್ರತಿಫಲವಾಗಿ ಹೆಚ್ಚಿನ ಹುದ್ದೆಗೆ ಬಡ್ತಿ ಹೊಂದಿದ ಶ್ಯಾಮರಾಯರಿಗೆ ಕಂಡಿದ್ದು ಪತ್ನಿ ಮತ್ತು ಮಕ್ಕಳೊಂದಿಗಿನ ಒಂದು ಸುಖೀ ಕುಟುಂಬ.

ಮಕ್ಕಳು ಬೆಳೆದಂತೆಲ್ಲ ಹೆಚ್ಚಿನ ವಿದ್ಯಾಭ್ಯಾಸ ಪಡೆಯುವುದರೊಂದಿಗೆ ಅವರು ಒಳ್ಳೆಯ ಸಂಸ್ಕಾರಗಳನ್ನು, ಜೀವನದ ಮೌಲ್ಯಗಳನ್ನು ಅಳವಡಿಸಿಕೊಳ್ಳುವಲ್ಲಿ ಸುಮಿತ್ರಾ ಮತ್ತು ಶ್ಯಾಮರಾವ್ ಒಂದಾಗಿ ಶ್ರಮಿಸಿದರು. ಇಲ್ಲದ ಅಭಿಪ್ರಾಯಭೇದಗಳಿಗೆ ಅವಕಾಶ ಕೊಡಲಿಲ್ಲ. ಮಕ್ಕಳನ್ನು ಅತಿಯಾಗಿ ಮುದ್ದಿಸದೇ, ಅತಿಯಾಗಿ ದಂಡಿಸದೇ ಅವರ ಬೇಕು ಬೇಡಗಳನ್ನು ಮನವರಿಕೆ ಮಾಡಿಸುವಲ್ಲಿ ಇಬ್ಬರದೂ ಎತ್ತಿದ ಕೈ. ತಮ್ಮ ಸ್ವಂತ ಸಾಮರ್ಥ್ಯಗಳೇನಿದ್ದರೂ ಬದಿಗಿಟ್ಟು ಒಬ್ಬರ ನಿಲುವನ್ನು ಇನ್ನೊಬ್ಬರು ಗೌರವಿಸಿ ನಡೆದರು. ಸುಮಿತ್ರಾ ತನ್ನ ತವರಿನ ಬಗ್ಗೆ ಹೆಚ್ಚಿನ ವ್ಯಾಮೋಹ ತೋರದೆ, ಅತ್ತೆಯ ಮನೆಯ ಬಗ್ಗೆ ಕೀಳರಿಮೆ ಪಡದೆ ತನ್ನದೇ ಆದ ಸ್ವಂತಿಕೆಯನ್ನು ರೂಢಿಸಿಕೊಂಡಿದ್ದು, ಶ್ಯಾಮರಾಯರ ಸ್ವಭಾವವೂ ಅದಕ್ಕೆ ಹೊಂದಿಕೊಂಡಿತ್ತು. ಇಬ್ಬರೂ ಸಹ ವ್ಯಕ್ತಿ ಪ್ರಾಮುಖ್ಯತೆಗಿಂತ ಆ ಸಂಬಂಧವನ್ನು ಗೌರವಿಸಿ ನಡೆದಾಗ ಸ್ನೇಹಿತರು, ಸಂಬಂಧಿಗಳು ಮೆಚ್ಚುಗೆ ತೋರಿದ್ದರು. ತಮ್ಮ ಹಣಕಾಸಿನ ಪರಿಸ್ಥಿತಿಯನ್ನು ಅರಿವಿಟ್ಟುಕೊಂಡು ಸಂಸಾರದಲ್ಲಿ ಮಿತವ್ಯಯ ನಡೆಸಿದರೂ ಸುಮಿತ್ರಾ ಬಯಸಿದ ಕೆಲವೇ ಕೆಲವು ವಸ್ತುಗಳನ್ನು ಖರೀದಿಸಲು ಶ್ಯಾಮರಾಯರು ಇಲ್ಲವೆನ್ನಲಿಲ್ಲ.

ಮಕ್ಕಳಿಬ್ಬರೂ ಹೆಚ್ಚಿನ ವಿದ್ಯಾಭ್ಯಾಸ ಗಳಿಸಿ, ಒಳ್ಳೆಯ ಕೆಲಸ ಪಡೆದು, ಮದುವೆ ಮಾಡಿಕೊಂಡು ನೆಲೆಗೊಳ್ಳುವಷ್ಟರಲ್ಲಿ ಶ್ಯಾಮರಾವ್ ತಮ್ಮ ಕೆಲಸದಿಂದ ನಿವೃತ್ತಿ ಹೊಂದಿದರು. ಹಿರಿಯ ಮಗ ದೂರದ ಡೆಹ್ರಾಡೂನಿನಲ್ಲಿ ಕೆಲಸದಲ್ಲಿದ್ದು, ಅಲ್ಲಿನ ಚಳಿ ಶ್ಯಾಮರಾಯರ ಆರೋಗ್ಯಕ್ಕೆ ಒಗ್ಗುತ್ತಿರಲಿಲ್ಲವೆಂದು ಊರಿನಲ್ಲಿನ ತಮ್ಮ ಸ್ವಂತ ಮನೆಯಲ್ಲಿಯೇ ಕಿರಿಮಗನ ಜೊತೆ ನೆಲೆಸುವಂತಾಯಿತು. ಕಿರಿಯ ಸೊಸೆ ಇವರ ಜೊತೆ ಹೊಂದಿಕೊಂಡು ಹೋಗದೇ ಒಂದೆರಡು ಬಾರಿ ಮಾತಿನ ಚಕಮಕಿಯಾದಾಗ, ಡೆಹ್ರಾಡೂನಿಗೆ ತೆರಳುವ ಶ್ಯಾಮರಾವ್ ಅವರ ನಿರ್ಧಾರವನ್ನು ಸುಮಿತ್ರಾ ಒಪ್ಪಲಿಲ್ಲ. ಸೊಸೆಯ ನಡೆ-ನುಡಿ ತಮ್ಮ ಸ್ವಾಭಿಮಾನಕ್ಕೆ ಸರಿಹೊಂದುತ್ತಿಲ್ಲವೆಂದು ಯೋಚಿಸುತ್ತಿರುವಾಗಲೇ ಅದೊಂದು ದಿನ ಸೊಸೆ ಶ್ಯಾಮರಾಯರಿಂದಾದ ಸಣ್ಣದೊಂದು ತಪ್ಪನ್ನು ಅತಿದೊಡ್ಡದಾಗಿಸಿದ್ದಲ್ಲದೇ ಅವರ ನಿವೃತ್ತ ಜೀವನವನ್ನು ಅವಮಾನಿಸುವಂತೆ ಮಾತನಾಡಿದಳು.ಆಗ ಸುಮಿತ್ರಾ ಮಗನನ್ನು ಕರೆದು ಅವನು ತನ್ನ ಸಂಸಾರದೊಂದಿಗೆ ಬೇರೆ ಮನೆಗೆ ಹೋಗಬೇಕೆಂದು ಖಡಾಖಂಡಿತವಾಗಿ ಹೇಳಿದರು.ಮಕ್ಕಳು ಚಿಕ್ಕವರಾಗಿದ್ದಾಗ, ಅದೆಷ್ಟೋ ಸಲ ಮಕ್ಕಳ ತಪ್ಪಿನಲ್ಲೂ ಅವರ ಪರವಹಿಸಿ ಮಾತಾನಾಡಿದ್ದ ಸುಮಿತ್ರ, ಅಂದು ಮಗ, ಸೊಸೆಯ ವಿರುದ್ಧ ನಿಂತು ಸಮರ್ಥಿಸಿಕೊಂಡಿದ್ದು ತನ್ನ ಪತಿ ಶ್ಯಾಮರಾಯರನ್ನು. "ತಾಯಿ ಮಗನನ್ನು ನಾನು ದೂರ ಮಾಡಿದಂತಾಗುವುದಿಲ್ಲವೇನೇ?" ಎಂದು ಕೇಳಿದ ಪತಿಗೆ,"ರೆಕ್ಕೆ ಬಲಿತ ನಂತರ ಗುಬ್ಬಚ್ಚಿ ಮರಿ ಸ್ವತಂತ್ರವಾಗಿ ಹಾರಿಹೋಗುವುದಿಲ್ಲವೇ?" ಎಂದು ಪ್ರಶ್ನಿಸಿದರು.

ಮುಂದಿನ ಪುಟಕ್ಕೆ


Copyright © KCO – Brindavana

ಹಿಂದಿನ ಪುಟದಿಂದ

ಏನೂ ತೋಚದಂತಾಗಿ ಸುಮ್ಮನಾದ ಶ್ಯಾಮರಾಯರಿಗೆ, ಕೆಲವೊಮ್ಮೆ ಸುಮಿತ್ರಾ ಮಕ್ಕಳಿಬ್ಬರ ಬಗ್ಗೆ ಅತಿ ಕಾಳಜಿ ವಹಿಸಿ ಚಿಂತೆಗೊಂಡು, ಮಕ್ಕಳಿಗೆ ಅದು ಕಿರಿಕಿರಿಯೆನಿಸಿ ಕೋಪಗೊಂಡಾಗ, ತಾವೂ ಸಹ ಪತ್ನಿಯನ್ನೇ ಸಮರ್ಥಿಸಿ ಮಕ್ಕಳಿಗೆ ಬುದ್ಧಿ ಹೇಳಿದ್ದು ನೆನಪಾಗಿತ್ತು. ವೃದ್ಧ ತಂದೆ-ತಾಯಿಯರನ್ನು ಬಿಟ್ಟು ಹೋಗಲು ಮನಸ್ಸು ಒಪ್ಪದಿದ್ದರೂ, ತಾಯಿಯ ಮಾತಿಗೆ ಎದುರಾಡದೆ ಕಿರಿಯ ಮಗ ಬೇರೆ ಮನೆ ಮಾಡಿಕೊಂಡು ಹೋದ.

(ಡೈರಿ ಓದುವುದನ್ನು ನಿಲ್ಲಿಸಿ ಸುಮಾ ಅಜ್ಜಿಯತ್ತ ನೋಡಿದಾಗ, ಅವರು ನೆಮ್ಮದಿಯಿಂದ ನಿದ್ರಿಸುತ್ತಿರುವಂತೆ ಕಂಡರು. ತಾತನನ್ನೊಮ್ಮೆ ನೆನೆದು ಮುಗುಳುನಕ್ಕ ಸುಮಾ, ಮತ್ತೆ ಡೈರಿಯ ಪುಟಗಳತ್ತ ಕಣ್ಣು ಹಾಯಿಸಿದಳು.)

ದೊಡ್ಡ ಮನೆಯಲ್ಲೀಗ ಸುಮಿತ್ರಾ ಮತ್ತು ಶ್ಯಾಮರಾಯರಿಬ್ಬರೇ ಇದ್ದುದು ಮೊದಮೊದಲು ಬಿಕೋ ಎನಿಸಿದರೂ ದಿನಗಳೆದಂತೆ ರೂಢಿಯಾಗಿತ್ತು. ಶ್ಯಾಮರಾಯರ ನಿವೃತ್ತಿ ವೇತನ ನೆಮ್ಮದಿಯ ಬದುಕನ್ನು ನಡೆಸಲು ಆಸರೆಯಾಗಿತ್ತು. ಮಿತವ್ಯಯದ, ಅನವಶ್ಯಕ ವಸ್ತುಗಳಿಗೆ ಮಾರುಹೋಗದ ಜೀವನಶೈಲಿ, ಅಲ್ಪ ಸ್ವಲ್ಪ ಉಳಿತಾಯ ಈ ಇಳಿವಯಸ್ಸಿನಲ್ಲಿ ಅವರು ಮಕ್ಕಳನ್ನು ಅವಲಂಬಿಸದಂತೆ ನೆರವಾದವು. ಮುಪ್ಪಿನಲ್ಲಿ ಶಕ್ತಿಗುಂದಿ, ಆರೋಗ್ಯದಲ್ಲಿ ಸಣ್ಣ-ಪುಟ್ಟ ಸಮಸ್ಯೆಗಳಿದ್ದರೂ, ಬದುಕಿನ ಆಸಕ್ತಿ ಕಡಿಮೆಯಾಗಬಾರದೆಂದು ಅರಿತು, ಜೊತೆಯಾಗಿ ಹಲವಾರು ದೇವಸ್ಥಾನಗಳನ್ನು, ಯಾತ್ರಾ ಸ್ಥಳಗಳನ್ನು ನೋಡಿಕೊಂಡು ಬಂದರು. ಸಭೆ ಸಮಾರಂಭಗಳಿಗೆ ಹೋಗಿಬರುವುದು, ಹಲವಾರು ಆಧ್ಯಾತ್ಮಿಕ, ವೈಚಾರಿಕ ಪುಸ್ತಕಗಳನ್ನು ಓದುವುದು ಹವ್ಯಾಸವಾಯಿತು. ಅಲ್ಲದೇ ಟಿವಿಯಲ್ಲಿ ಬರುವ ಅದೆಷ್ಟೋ ಧಾರಾವಾಹಿಗಳು ಸಮಯ ಕಳೆಯಲು ಸಂಗಾತಿಗಳಾದವು. ಶಾಲಾ-ಕಾಲೇಜುಗಳ ರಜೆಯ ಸಮಯದಲ್ಲಿ ಮನೆಗೆ ಬರುವ ಮಕ್ಕಳು, ಮೊಮ್ಮಕ್ಕಳನ್ನು ಮುದ್ದಿನಿಂದ ಕಂಡರು. ಒಬ್ಬರಿಗೊಬ್ಬರು ಆರೋಗ್ಯದ ಕಾಳಜಿವಹಿಸಿದರಾದರೂ ಅದೊಂದು ದಿನ ಸುಮಿತ್ರಾ ಪಾರ್ಶ್ವವಾಯು ಪೀಡಿತರಾಗಿ ದೇಹದ ಬಲಭಾಗದ ಸ್ವಾಧೀನ ಕಳೆದುಕೊಂಡರಲ್ಲದೇ ಮಾತೂ ಸಹ ಬಿದ್ದು ಹೋಯಿತು. ಚಿಕಿತ್ಸೆಗಳು ಫಲಕಾರಿಯಾಗದೇ ಹಾಸಿಗೆ ಹಿಡಿದ ಸುಮಿತ್ರಾರನ್ನು ನೋಡಿದ ಶ್ಯಾಮರಾಯರಿಗೆ ಆಘಾತವಾದರೂ ತೋರ್ಪಡಿಸದೆ ಪತ್ನಿಯ ಶುಶ್ರೂಷೆಯಲ್ಲಿ ತೊಡಗಿದರು.

ಡೈರಿಯ ಮುಂದಿನ ಹಾಳೆಗಳೆಲ್ಲ ಖಾಲಿಯಾಗಿದ್ದವು. ಆದರೂ ಕೆಲವು ಪುಟಗಳನ್ನು ತಿರುವಿಹಾಕಿದ ಸುಮಾ, ಅಜ್ಜಿ ಅನಾರೋಗ್ಯದಿಂದ ಹಾಸಿಗೆ ಹಿಡಿದಾಗಿನಿಂದ ತಾತ ಡೈರಿ ಬರೆಯುವುದನ್ನು ನಿಲ್ಲಿಸಿದ್ದಾರೆಂದು ಮನಗಂಡಳು. ಅಲ್ಲದೇ, ಅಜ್ಜಿಯ ಅನಾರೋಗ್ಯದ ಕಾರಣದಿಂದಾಗಿ ತನ್ನ ಅಪ್ಪ ಡೆಹ್ರಾಡೂನಿನಲ್ಲಿನ ಕೆಲಸ ಬಿಟ್ಟು ಈ ಊರಿಗೆ ಮರಳಲು ನಿರ್ಧರಿಸಿದಾಗ ಅಮ್ಮ ಅದನ್ನು ಒಪ್ಪಿದ್ದು ನೆನಪಾಯಿತು. ಡೈರಿಯನ್ನು ಮುಚ್ಚಿ ಮೇಲಿಡಬೇಕೆಂದುಕೊಂಡಾಗ, ಕೊನೆಯ ಪುಟದಲ್ಲಿ ಏನೋ ಬರೆದದ್ದು ಕಂಡಳು ಸುಮಾ. ಪುಟ ತಿರುವಿ ನೋಡಿದ ಸುಮಾಳಿಗೆ ವರಕವಿ ದ.ರಾ.ಬೇಂದ್ರೆಯವರ 'ಬದುಕು ಮಾಯೆಯ ಮಾಟ' ಕವನದ ಸಾಲುಗಳು ಕಂಡವು . ಅದು ಶ್ಯಾಮರಾಯರಿಗೆ ಬಹಳ ಇಷ್ಟವಾದ ಪದ್ಯವಾಗಿತ್ತು. ತನ್ನ ಅಮ್ಮ ಆಗಾಗ ಹಾಡುತ್ತಿದ್ದ ಆ ಹಾಡನ್ನು ಸುಮಾ ಕೂಡ ಕಲಿತಿದ್ದಳು. ತಾತ ಒಂದೆರಡು ಬಾರಿ ಅವಳಿಂದ ಈ ಹಾಡನ್ನು ಹಾಡಿಸಿದ್ದರು. ಆ ಹಾಡಿನೊಂದಿಗೆ ತಾನು ಮೆಟ್ಟಿಲು ಹತ್ತಿ ಬರುವಾಗ ಅಮ್ಮ ಸಂಜೆ ಕಾಲೇಜಿನಿಂದ ಬೇಗ ಬರಬೇಕೆಂದು ಹೇಳಿದ್ದು ನೆನಪಿಸಿಕೊಂಡ ಅವಳಲ್ಲಿ ಸಂತೋಷ ಮೂಡಿತ್ತು. ಅಂದು ಅವಳ ಅಜ್ಜಿ-ತಾತರ 50ನೇ ಮದುವೆ ವಾರ್ಷಿಕೋತ್ಸವ!

ಕೆಳಗಡೆ ಬಾಗಿಲು ತೆರೆದ ಶಬ್ದ ಕೇಳಿ, ಅಜ್ಜಿಯನ್ನು ನೋಡಿಕೊಳ್ಳಲು ನೇಮಿಸಿದ್ದ ನರ್ಸ್ ಬಂದಿರಬಹುದೆಂದುಕೊಂಡು, ಡೈರಿಯನ್ನು ಕೈಯಲ್ಲಿ ಹಿಡಿದುಕೊಂಡೇ ಬಾಗಿಲ ಕಡೆ ಹೊರಟ ಸುಮಾಗೆ ಕೆಳಗಿನಿಂದ ಮೆಟ್ಟಿಲು ಹತ್ತಿ ಬಂದ ತಾತ ಶ್ಯಾಮರಾವ್ ಕಂಡರು. ಡೈರಿ ಹಿಡಿದಿದ್ದ ಕೈಯನ್ನು ಸರಕ್ಕನೆ ಬೆನ್ನ ಹಿಂದೆ ಅಡಗಿಸಿಕೊಂಡ ಸುಮಾ ತಾತನತ್ತ ನೋಡಿದಾಗ, ಅವರು ಆಯಾಸಗೊಂಡಂತಿತ್ತು.ಯಾಕೆ ತಾತ ಸುಸ್ತಾ? ಜಾಸ್ತಿ ವಾಕಿಂಗ್ "ಮಾಡಿದ್ರಾ?" ಎಂದ ಸುಮಾಳ ಪ್ರಶ್ನೆಗೆ ಉತ್ತರಿಸದೆ ಶ್ಯಾಮರಾವ್, "ಪುಟ್ಟಾ, ನೀನು ತಂದಿದ್ದ ಗುಲಾಬಿ ಹೂವಿನ ಗುಚ್ಛವನ್ನು ನಾನೇ ತೊಗೊಂಡಿದ್ದೆ. ನಿಮ್ಮ ಕಾಲೇಜಿನಲ್ಲಿ 'ಫೇರವೆಲ್ ಪಾರ್ಟಿ' ಇದೆ ಅಂತ ಹೇಳಿದ್ಯಲ್ಲ. ನೀನು ಕಾಲೇಜಿಗೆ ಹೊರಡುವಷ್ಟರಲ್ಲಿ ಹೂವು ತಂದಿಡಬೇಕೆಂದು ಹೋಗಿದ್ದೆ. ತೊಗೊ ಪುಟ್ಟ, ಹೂವು" ಎಂದು ತಾವು ತಂದಿದ್ದ ಗುಲಾಬಿ ಹೂವಿನ ಗುಚ್ಛವನ್ನು ಕೊಟ್ಟರು. "ಕಾಫಿ ಕುಡೀದೆ ಹೋಗಿದ್ರಲ್ಲ ತಾತ, ಯಾಕೆ ಸುಸ್ತಾಗಿರೋ ಹಂಗಿದೆ. ನಡೆದದ್ದು ಜಾಸ್ತಿಯಾಯ್ತಾ?" ಕಾಳಜಿಯಿಂದ ಕೇಳಿದಳು ಸುಮಾ. ಅಕ್ಕರೆಯಿಂದ ಮೊಮ್ಮಗಳನ್ನೊಮ್ಮೆ ನೋಡಿದ ತಾತ, "ಹೌದಮ್ಮ, ನಡೆದದ್ದು ಸ್ವಲ್ಪ ಜಾಸ್ತಿಯಾಯ್ತು. ಇಲ್ಲೇ ರಸ್ತೆ ಕೊನೆಯಲ್ಲಿ ಕುಳಿತು ಹೂವು ಮಾರೋ ಹುಡುಗಿ ಹತ್ರ ಕೆಂಪು ಗುಲಾಬಿ ಹೂವು ಮುಗಿದು ಹೋಗಿತ್ತು. ದೂರದ ಮಾರ್ಕೆಟ್ಟಿಗೆ ಹೋಗಿದ್ದೆ" ಎಂದ ಶ್ಯಾಮರಾಯರ ಕೈ ಹಿಡಿದು, "ಬನ್ನಿ ತಾತ, ಕೂತ್ಕೊಳಿ" ಎಂದು ಕೋಣೆಯಲ್ಲಿನ ಕುರ್ಚಿಯವರೆಗೆ ಸುಮಾ ಕರೆದೊಯ್ದಳು. ಆಗಲೇ ಎಚ್ಚರಗೊಂಡಿದ್ದ ಸುಮಿತ್ರ, ಮನದಲ್ಲಿನ ಕಾಳಜಿಯನ್ನೇ ಕಣ್ಣಿನಲ್ಲಿ ಪ್ರಶ್ನೆಯಾಗಿಸಿಕೊಂಡು ಎಡಗೈಯಿಂದ ಸನ್ನೆ ಮಾಡಿದ ಪತ್ನಿಯತ್ತ ತಿರುಗಿ ಶ್ಯಾಮರಾವ್, "ಏನೂ ಆಗಿಲ್ವೇ, ಜಾಸ್ತಿ ನಡೆದಿದ್ದಕ್ಕೆ ಸ್ವಲ್ಪ ಸುಸ್ತಾಗಿದೆ" ಎಂದರು. ಮೈಯಲ್ಲಿನ ಶಕ್ತಿಗುಂದಿದ್ದರೂ ತನ್ನ ಸಂತೋಷಕ್ಕಾಗಿ ದೂರದ ಮಾರ್ಕೆಟ್ಟಿನವರೆಗೆ ಹೂವುಗಳನ್ನು ತರಲೆಂದು ಹೋಗಿದ್ದ ತಾತನನ್ನು ನೋಡಿ ಸುಮಾಳ ಕಣ್ಣಲ್ಲಿ ನೀರೂರಿತ್ತು.

ಡೈರಿಯನ್ನು ಟೇಬಲ್ಲಿನ ಮೇಲಿಟ್ಟ ಸುಮಾ ಏನೋ ಯೋಚಿಸುವಂತೆ ಕಂಡಳು. ಪ್ರತಿಯೊಂದು ಸಂಬಂಧಗಳ ನಿಜವಾದ ಆಳವೇನೆಂದು ಅರಿಯದೇ, ಎಳಸುತನವನ್ನೇ ರೂಢಿಸಿಕೊಂಡು,ಕಾಲ ಬದಲಾದರೂ ಬದುಕಿನ ಮೌಲ್ಯಗಳು ಬದಲಾಗುವುದಿಲ್ಲವೆಂದು ತಿಳಿಯುವ ಗೋಜಿಗೂ ಹೋಗದೇ, ಬರೀ ಆಚರಣೆಯನ್ನು ಅಬ್ಬರವಾಗಿಸಿಕೊಂಡು, ತೋರಿಕೆಯ ಮೆಚ್ಚುಗೆಗಳನ್ನು Facebook, What'sapp ಗಳಲ್ಲಿ ಟೈಪಿಸಿ ಸಂಭ್ರಮಿಸುವುದನ್ನು ಬದುಕಾಗಿಸಿಕೊಂಡವರೇ ಈಗ ಹೆಚ್ಚಿನ ಸಂಖ್ಯೆಯಲ್ಲಿರುವಾಗ, ಐವತ್ತು ವರ್ಷದಿಂದ ಜೀವನ ಸಂಗಾತಿಗಾಳಾಗಿ, ಆ ಸಂಬಂಧವನ್ನು ಶ್ರದ್ಧೆಯಿಂದ ಪೂಜಿಸಿ, ತಮ್ಮ ಸುದೀರ್ಘ ಪ್ರೇಮವನ್ನು ಒಂದು ಗುಲಾಬಿ ಹೂವಿನಿಂದಲೇ ಸಂಭ್ರಮಿಸಬೇಕೆಂದುಕೊಂಡಿದ್ದ ಅಜ್ಜಿ-ತಾತರ ಸರಳ ಬದುಕು ಸುಮಾಳಿಗೆ ದಿವ್ಯವಾಗಿ ಕಂಡಿತ್ತು!

ಅಲ್ಲಿದ್ದ ಗುಲಾಬಿ ಹೂವುಗಳನ್ನು ಕೈಗೆತ್ತಿಕೊಂಡ ಸುಮಾ, "ತಾತ, ನೀವು ಅಜ್ಜಿಗೆ I Love You ಅಂತ ಹೇಳಿ ಈ ಹೂವು ಕೊಡಿ" ಎಂದು ಒಂದು ಗುಲಾಬಿ ಹೂವನ್ನು ಶ್ಯಾಮರಾಯರ ಕೈಲಿಟ್ಟು ಒತ್ತಾಯಿಸಿದಳು. ಅರೆಕ್ಷಣ ಗಲಿಬಿಲಿಗೊಂಡ ತಾತ ಮೊಮ್ಮಗಳ ಒತ್ತಾಯಕ್ಕೆ ಮಣಿದರು. ಸುಮಿತ್ರಾರ ಕೈ ಹಿಡಿದ ಶ್ಯಾಮರಾವ್, "I Love You" ಎಂದು ಗುಲಾಬಿ ಹೂವು ಕೊಟ್ಟಾಗ, ಸುಕ್ಕುಗಟ್ಟಿದ ಅವರ ಕೈ ನಡುಗಿ, ಕಣ್ಣಲ್ಲಿ ಹೊಳಪು ಕಂಡಿತ್ತು! ಸುಮಿತ್ರಾರ ಎಡಗೈಯಲ್ಲಿ ಗುಲಾಬಿ ಹೂ ಕೊಟ್ಟು, ತಾತನಿಗೆ ಕೊಡಲು ಹೇಳಿದಾಗ, ಮಂಚದ ಮೇಲೆ ಮಲಗಿದ್ದ ಸುಮಿತ್ರಾರ ಗುಳಿಬಿದ್ದ ಕಣ್ಣುಗಳಲ್ಲಿಯೂ ಅದೇ ಹೊಳಪು! ಅವರಿಬ್ಬರೂ ಪರಸ್ಪರ ಕೈ ಹಿಡಿದುಕೊಂಡಿದ್ದ ಆ ಕ್ಷಣದಲ್ಲಿ ಕೆಳಗಡೆ ಡ್ರಾಯಿಂಗ್ ರೂಮಿನ ಟಿವಿಯ ಕನ್ನಡದ ಚಾನೆಲಿನಲ್ಲಿ ಹಾಡೊಂದು ಕೇಳಿಬಂದಿತ್ತು.

**" ಆತನಾಕೆಯೆ ನಮ್ಮ ಜೀವನೌಕೆಯ ತಮ್ಮ**
**ಧ್ರುವ ಮರೆಯದಂತೆ ನಡೆಸುತ್ತಲಿರಲಿ**
**ಈ ನಾನು ಆ ನೀನು**
**ಒಂದೆ ತಾನಿನ ತಾನು**
**ತಾಳಲಯ ರಾಗಗಳು ಸಹಜ ಬರಲಿ**
**ಬದುಕು ಮಾಯೆಯ ಮಾಟ . . . ."**

ಅಜ್ಜಿ-ತಾತನ ಪ್ರೀತಿಯ ಆ ಸುಂದರ ಕ್ಷಣವನ್ನು ಆನಂದಿಸುತ್ತಿದ್ದ ಸುಮಾ "ಆದಿತ್ಯ, ಚಾನೆಲ್ ಬದಲಾಯಿಸಬೇಡ್ವೋ, ತಾತನ ಫೇವರಿಟ್ ಹಾಡು ಬರ್ತಾ ಇದೆ " ಎಂದು ಕೂಗಿದಳು.




Copyright © KCO – Brindavana

ಸಂಚಿಕೆ
೧೧
ಜುಲೈ, ೨೦೧೭



## ಝುತ್- ಅಮಿ ಫ್ರೆಂಚ್!



ಕಾವ್ಯಾ ಕಡಮೆ
ನಾಗರಕಟ್ಟೆ

ಇದು ನಾನು ಕರ್ನಾಟಕ ಯುನಿವರ್ಸಿಟಿಯಲ್ಲಿ ಎಂ.ಎ ಓದುವಾಗ ನಡೆದದ್ದು. ನಮ್ಮ ವಿಶ್ವವಿದ್ಯಾಲಯದಲ್ಲಿ ಇರುವ ಬಹಳಷ್ಟು ಸುಂದರ ವಿಷಯಗಳಲ್ಲಿ 'ಓ.ಇ.ಸಿ' ಕೂಡ ಒಂದು. ಅಂದರೆ 'ಓಪನ್ ಇಲೆಕ್ಟಿವ್ ಕೋರ್ಸ್'. ಅಲ್ಲಿ ಪ್ರತಿ ಶುಕ್ರವಾರ ಮತ್ತು ಶನಿವಾರ ಎಲ್ಲ ಡಿಪಾರ್ಟ್ಮೆಂಟುಗಳೂ ಕಲಸುಮೇಲೋಗರವಾಗಿ ಬಿಟ್ಟಿರುತ್ತಿದ್ದವು. ಎಲ್ಲ ವಿದ್ಯಾರ್ಥಿಗಳೂ ಅಲ್ಲಿ ಲಭ್ಯವಿರುವ ನಲವತ್ತೈದಕ್ಕೂ ಹೆಚ್ಚು ಡಿಪಾರ್ಟ್ಮೆಂಟುಗಳಲ್ಲಿ ಹಂಚಿಹೋಗಿಬಿಟ್ಟಿರುತ್ತಿದ್ದರು. ಈ ಎರಡು ದಿನಗಳು ಮಾತ್ರ ಯೂನಿವರ್ಸಿಟಿಗೆ ವಿಶೇಷವಾದ ಏಕತೆ ಪ್ರಾಪ್ತವಾಗುತ್ತಿತ್ತು. ನಾವು ಸ್ನೇಹಿತರೆಲ್ಲ ಇದನ್ನು ಕನ್ನಡದಲ್ಲಿ ಸೊಗಸಾಗಿ ತರ್ಜುಮೆ ಮಾಡಿ 'ತೆರೆದ ಆಯ್ಕೆಯ ವಿಷಯಗಳು' ಅಂತ ತುಂಟ ಜೋಕು ಮಾಡಿಕೊಂಡು ಮನಃಪೂರ್ತಿ ನಗುತ್ತಿದ್ದೆವು.

ಈ ಓಪನ್ ಇಲೆಕ್ಟಿವ್ ಕೋರ್ಸುಗಳು ಪ್ರತಿ ಸೆಮಿಸ್ಟರ್ ಗೆ ಬದಲಾಗುತ್ತಿತ್ತು. ಹೀಗಾಗಿ ಪಿಜಿ ಕೋರ್ಸು ಮುಗಿಯುವುದರೊಳಗೆ ವಿದ್ಯಾರ್ಥಿಗೆ ಗರಿಷ್ಟ ನಾಲ್ಕು ಬೇರೆ ವಿಭಾಗಗಳ ಪರಿಚಯವಾಗಿರುತ್ತಿತ್ತು. ಅದೃಷ್ಟವಂತರಿಗೆ ಕಳೆದ ಸೆಮಿಸ್ಟರಿನಲ್ಲಿ ಪಡೆದ ಓ.ಇ.ಸಿಯೇ ಈ ಸಲವೂ ಮುಂದುವರೆದು ಅವರನ್ನು ನಿರಾಳರನ್ನಾಗಿ ಮಾಡಿರುತ್ತಿತ್ತು. ಆದರೆ ಒಂದು ಕ್ಷಣವೂ ಒಬ್ಬರಿಗೊಬ್ಬರು ಬಿಟ್ಟಿರಲಾಗದ ಖಾಸಾ ಸ್ನೇಹಿತೆಯರಿಗೆ ಈ ವ್ಯವಸ್ಥೆ ತೀರಾ ಸಂಕಟ ತರುವುದು. ಹಾಗೆಯೇ ತುಂಬಾ ಓದುವವರಿಗೂ ಕೂಡ ಈ ತೆರೆದ ಆಯ್ಕೆಯ ವಿಷಯಗಳು ತಲೆನೋವುಂಟು ಮಾಡುವುದು. ನಮ್ಮ ವಿಷಯಕ್ಕೆ ಚೂರೂ ಉಪಯೋಗವಾಗದ ಡಿಪಾರ್ಟುಮೆಂಟುಗಳಲ್ಲಿ ಕಲಿತರೆ 'ಸ್ಕೋರ್' ಆಗುವುದಿಲ್ಲ ಅಂತ ಕೆಲವರು ಅವಲತ್ತುಕೊಳ್ಳುವುದನ್ನು ಕಂಡಿದ್ದೆ. ಆದರೆ ನಮ್ಮ ಸಬ್ಜೆಕ್ಟಿನ ಜೊತೆಗೆ ಮತ್ತೊಂದು ವಿಭಾಗದಲ್ಲಿ ಹೋಗಿ ಕಲಿಯುವ ಅವಕಾಶ ಸಿಕ್ಕರೆ ಅದು ಖುಷಿಯ ವಿಷಯವಲ್ಲವೇ ಎನ್ನುವುದು ಕೆಲವರ ವಾದ.

ಎರಡನೆಯ ಸೆಮಿಸ್ಟರಿನಲ್ಲಿ ನನಗೆ 'ಫ್ರೆಂಚ್' ತೆರೆದ ಆಯ್ಕೆಯ ವಿಷಯವಾಗಿ ಬಂದಿತ್ತು. 'ಪ್ರಿಯಾರಿಟಿ' ಲಿಸ್ಟಿನಲ್ಲಿ ಫ್ರೆಂಚೆಗೆ ನಾನು ಮೂರನೆಯ ನಂಬರ್ ಕೊಟ್ಟಿದ್ದ ನೆನಪು. ಪ್ರಿಯಾರಿಟಿಯಾಗಿ ಟಿಕ್ ಮಾಡುವಾಗ ಇದ್ದ ಹುಂಬ ಧೈರ್ಯ ನೋಟೀಸ್ ಬೋರ್ಡಿನ ಮುಂದೆ ನಿಂತ ಕ್ಷಣದಲ್ಲಿ ಇರಲಿಲ್ಲ. ನಾನೇ ಟಿಕ್ ಮಾಡಿದ್ದರಿಂದ ಈ ವಿಷಯವನ್ನು ಬದಲಿಸಿಕೊಳ್ಳುವ ಯಾವ ಆಯ್ಕೆಯೂ ಇರಲಿಲ್ಲ. "ಕನ್ನಡ- ಇಂಗ್ಲೀಷು- ಹಿಂದಿಗಳನ್ನು ಮೊದಲು ಸರಿಯಾಗಿ ಕಲಿಯಿರಿ ಕತ್ತೆಗಳಾ, ನಂತರ ನಾಲ್ಕನೆಯ ಭಾಷೆಗೆ ಹೋಗಿ" ಅಂತಂದ ಮೇಷ್ಟ್ರುಗಳ ಮಾತೆಲ್ಲ ಒಮ್ಮೆಲೇ ನೆನಪಾಗಿ ತಲೆಯಲ್ಲಿ ಯಾವ ಸದ್ದುಗಳೂ ಬರಲಿಲ್ಲ. ಈ ಫ್ರೆಂಚ್ ಮಾಯಾಂಗನೆ ನನಗೆ ಅದೃಷ್ಟ ತರುತ್ತಾಳೋ ಇಲ್ಲವೋ ಅಂತ ಖುದ್ದು ನಾನು ಪರೀಕ್ಷೆಗೆ ಅಣಿಯಾಗಲೇಬೇಕಿತ್ತು.

ಆದರೆ ಮೊದಲ ದಿನದಿಂದಲೇ ಅತಿಮಧುರ ಭಾಷೆಯಾದ ಫ್ರೆಂಚ್ ನನ್ನನ್ನೂ ಸೇರಿದಂತೆ ನನ್ನ ಓ.ಇ.ಸಿಯ ಕ್ಲಾಸುಮೇಟುಗಳಿಗೆಲ್ಲ ಮೋಡಿಮಾಡಿಬಿಟ್ಟಿತ್ತು. ಎಲ್ಲಕ್ಕಿಂತ ಮೊದಲು ನಮ್ಮನ್ನು ಮೋಹಗೊಳಿಸಿದ ಸಂಗತಿಯೆಂದರೆ ಫ್ರೆಂಚಿನಲ್ಲಿ ಇಂಗ್ಲಿಷಿನ 'ಬಾಯ್' ಎನ್ನುವ ಶಬ್ದವೇ ಇಲ್ಲ. ಅಲ್ಲಿ 'ಬಾಯ್' ಎನ್ನಲು 'ಔವರ್' ಎನ್ನುವ ಪದ ಬಳಸುತ್ತಾರೆ. ಇದರ ಅರ್ಥ 'ಮತ್ತೆ ಸಿಗೋಣ' ಎಂಬುದು. ಭಾಷೆಯೊಂದರ ಅತಿಸೂಕ್ಷ್ಮ ಪರಿಮಳವನ್ನು ಅಘ್ರಾಣಿಸಿ ಮುದಗೊಳ್ಳಲು ಇಂಥ ಕೆಲವು ಪುಟ್ಟಪುಟ್ಟ ಸಂಗತಿಗಳೇ ನಮಗೆ ಸಾಕಾಗಿದ್ದವು. ಟೇಬಲ್ಲು- ಬೆಂಚುಗಳನ್ನು ಯುನ್-ಥಾಬ್ಲ್ - ಆ ಬಾಂಕ್ ಎಂದು ಮುದ್ದುಮುದ್ದಾಗಿ ಕರೆಯುವ ಫ್ರೆಂಚರ ಸಂಸ್ಕೃತಿಯ ಪರಿಚಯವನ್ನು ನಮ್ಮ ಫ್ರೆಂಚ್ ಟ್ಯೂಟರ್ ಶಕುಂತಲಾ ಅವರು ನಮಗೆ ಹೇಳಿಕೊಟ್ಟಿದ್ದರು. ಹಾಗೆಯೆ ಅನ್ಯ ಭಾಷೆಯೊಂದರ ಒಳಹೊರಗನ್ನು ಮಾರ್ಮಿಕವಾಗಿ ತೆರೆದಿಡಲು ಅವರು ಹಲವಾರು ಉದಾಹರಣೆಗಳನ್ನು ನೀಡುತ್ತಿದ್ದರು. "ಈಗ ನೋಡಿ, ನೀಲಿ ಶರ್ಟು ಎನ್ನಲು ಇಂಗ್ಲಿಷಿನಲ್ಲಿ 'ಅ ಬ್ಲೂ ಶರ್ಟ್' ಅಂತಾರೆ. ಆದರೆ ಫ್ರೆಂಚಿನಲ್ಲಿ 'ಯುನ್ ಶಮೀಸ್ ಬ್ಲ' ಎಂದಾಗುತ್ತದೆ. ಆದರೆ ಪ್ರತಿ ಭಾಷೆಗೂ ಅದರದೇ ಆದ ಸಂಸ್ಕೃತಿಯಿದೆ, ಅದರದೇ ಆದ ಚೆಂದವಿದೆ.ಈ ಚೆಂದವು ಯಾರದು ತಪ್ಪು ಯಾರದು ಸರಿ ಎಂಬೆಲ್ಲ ವಾದಗಳಿಂದ ಹೊರತಾದದ್ದು" ಎನ್ನುವ ಅವರ ಮಾತು ನಮ್ಮನ್ನೆಲ್ಲ ಹೊಸದೊಂದು ಲೋಕದಲ್ಲಿ ತೇಲಾಡಿಸುತ್ತಿತ್ತು.

ಹೆಚ್ಚು ಕಡಿಮೆ ಇಂಗ್ಲೀಷಿನದೇ ಲಿಪಿಯಿದ್ದರೂ ಫ್ರೆಂಚಿನಲ್ಲಿ ಸ್ಪೆಲ್ಲಿಂಗುಗಳು ಹೆಚ್ಚು ಕ್ಲಿಷ್ಟ ಎಂದು ದಿಟವಾಗಿ ಹೇಳಬಹುದು. ಅಲ್ಲಿ ಹೇಳುವುದನ್ನು ಬರೆಯುವುದಿಲ್ಲ, ಬರೆಯುವುದನ್ನು ಹೇಳುವುದಿಲ್ಲ ಎಂದು ಶಕುಂತಲಾ ಅವರು ಯಾವಾಗಲು ಹಾಸ್ಯ ಮಾಡುತ್ತಿದ್ದರು. ಉದಾಹರಣೆಗೆ ಪೆನ್ ಎನ್ನಲು ಫ್ರೆಂಚಿನಲ್ಲಿ 'ಅನ್ ಸ್ಟೈಲೋ' ಎಂದು ಬರೆಯುತ್ತಾರೆ. ಇದನ್ನು 'ಆನ್ ಸ್ಟಿಲೋ' ಎಂದು ಓದಬೇಕು ಎಂದರೆ ಇಷ್ಟು ದಿನ 'ಸ್ಟೈಲ್' ಆಗಿ ಇಂಗ್ಲಿಷ್ ಮಾತನಾಡಿದವರ ಗತಿ ಏನಾಗಬೇಡ!

ಇನ್ನು ಹೀಗೆ ಓ.ಇ.ಸಿಗೆ ಫಾರಿನ್ ಲಾಂಗ್ವೇಜ್ ಬಂದಿದೆ ಎಂದರೆ ಎಲ್ಲರ ಗೆಳೆಯರೂ ಸಮಯ ಸಿಕ್ಕಿದಾಗಲೆಲ್ಲ "ಫ್ರೆಂಚಿನಲ್ಲಿ ಮೊಬೈಲಿಗೇನಂತಾರ? ಜರ್ಮನ್ನಿನಲ್ಲಿ ಮನೆಗೇನು ಅಂತಾರ?" ಅಂತ ಕೇಳಿಯೇ ಕೇಳುತ್ತಿದ್ದರು. ಇಂಥ ಪ್ರಶ್ನೆಗಳಿಗೆ ಉತ್ತರಿಸುವಾಗಲೆಲ್ಲ ಫಾರಿನ್ ಲಾಂಗ್ವೇಜ್ ಕಲಿಯುತ್ತಿರುವ ನಮಗೆ ತುಸು ಹೆಮ್ಮೆಯೇ ಆಗುತ್ತಿತ್ತು. ನಾವು ಕೂಡ ಸಂತೋಷದಿಂದ ಅದಕ್ಕೆಲ್ಲ ಉತ್ತರಿಸುತ್ತಿದ್ದೆವು. ಆದರೆ ನಮಗೂ ಅಗ್ನಿಪರೀಕ್ಷೆಯ ಕಾಲ ಸ್ವಲ್ಪೇ ದಿನಗಳಲ್ಲಿ ಬಂದೇಬಿಟ್ಟಿತು.

ಅದೊಂದು ಸಾಲು. ಆ ಸಾಲಿಗೆ ಫ್ರೆಂಚಿನಲ್ಲಿ ಏನೆನ್ನುತ್ತಾರೆ ಅಂತ ನನ್ನ ಗೆಳತಿ ಶಮಿತಾ ಕೇಳಿಯೇಬಿಟ್ಟಳು. 'ಗೊತ್ತಿಲ್ಲ ಹೋಗ, ಅದನ್ನ ಹ್ಯಾಂಗ ಕೇಳೂದೂ' ಅಂತ ಜಾರಿಕೊಳ್ಳಲೆತ್ನಿಸಿದೆ. 'ನಖರಾ ಮಾಡಬ್ಯಾಡ, ಲಗೂನ ಕೇಳಿಕೊಂಡ ಬಾ' ಅಂತ ಧಮಕಿ ಹಾಕಿದಳು. ಮುಂದಿನ ಶುಕ್ರವಾರ ಫ್ರೆಂಚ್ ಕ್ಲಾಸಿನ ಸ್ನೇಹಿತೆಯರ ಹತ್ತಿರ ನನ್ನ ಅಳಲು ತೋಡಿಕೊಂಡೆ. ಅವರ ಡಿಪಾರ್ಟುಮೆಂಟಿನ ಗೆಳತಿಯರನೇಕರಿಗೂ ಅದೇ ಸಾಲಿನ ಕುರಿತು ಕುತೂಹಲವಿತ್ತಂತೆ. ಕೆಮಿಸ್ಟ್ರಿಯ ಸೀಮಾಗಂತೂ ಮುಂದಿನ ವಾರ ಕೇಳಿಕೊಂಡು ಬರದಿದ್ದರೆ ಗ್ರೂಪಿಗೇ ಸೇರಿಸುವುದಿಲ್ಲ ಅಂತ ಅವಳ ಗೆಳತಿಯರು ಹೆದರಿಸಿಬಿಟ್ಟಿದ್ದರು. ಹೀಗಾಗಿ ಈ ದಿನ ಗುರಿ ತಲುಪಲೇಬೇಕಿರುವುದು ನಮ್ಮೆಲ್ಲರಿಗೂ ಅನಿವಾರ್ಯವಾಗಿತ್ತು.

ಮೊದಲು ಎಂಸಿಎ ಯ ನಮೃತಾ ಪ್ರಶ್ನೆ ಕೇಳುವ ನೆಪದಲ್ಲಿ ಹೋಗಿ ಏನೇನನ್ನೋ ಸುತ್ತಿ ಬಳಸಿ ಕೇಳಿ ಕೊನೆಗೂ ಕೇಳುವುದನ್ನೇ ಕೇಳಲು ಬಾಯಿಬಾರದೇ ಸುಮ್ಮನೆ ಸಪ್ಪೆಮೋರೆ ಹಾಕಿ ಹಿಂತಿರುಗಿದಳು. ನನಗೆ ಕೂಡ ಕೇಳುವ ಧೈರ್ಯವಿರಲಿಲ್ಲ. ಹಾಗೆಯೇ ಫಿಸಿಕ್ಸಿನ ಕವಿತಾ, ಸೈಕಾಲಜಿಯ ಪ್ರಾಂಜಲಿ, ಬಾಟನಿಯ ನಿಕುಂಜ್ ಕೂಡ ಟ್ಯೂಟರ್ ಹಿಂದೆ ಮುಂದೆ ಸುತ್ತಾಡಿ ಸುಮ್ಮನೇ ಬಂದು ಕೂತರು. ಏನು ಮಾಡುವುದು ಅಂತ ನಮ್ಮೆಲ್ಲರಿಗೂ ಚಿಂತೆಯಾಯಿತು. ಕೊನೆಗೆ ಎಂಬಿಎ ಯ ಪ್ರೀತಿಯೇ ಟ್ಯೂಟರ್ ಹತ್ತಿರ ಹೋಗಿ 'ಅದಕ್ಕೇನಂತಾರೆ ಮ್ಯಾಮ್.. ಇದಕ್ಕೇನಂತಾರೆ ಮ್ಯಾಮ್' ಅಂತ ಕೇಳಿದಂತೆ ಮಾಡಿ ಕೊನೆಯಲ್ಲಿ 'ಐ ಲವ್ ಯೂ' ಎನ್ನಲು ಏನಂತಾರೆ ಮ್ಯಾಮ್ ಅಂತ ಕೇಳಿಯೇಬಿಟ್ಟಳು. ನಮ್ಮೆಲ್ಲರಿಗೂ ಒಮ್ಮೆಲೇ ಉಸಿರುಗಟ್ಟಿದಂತಾಯಿತು. ಅಂತೆಯೇ ಟ್ಯೂಟರ್ ಗೂ ನಾವೆಲ್ಲ ಇಷ್ಟು ಹೊತ್ತಿನ ತನಕ ಮಾಡಿದ ಸೋಗು ಅರ್ಥವಾಗಿಹೋಯಿತು. ಅವರು ಪ್ರೀತಿಯನ್ನು ಒಮ್ಮೆ ಸುಂದರವಾಗಿ ನೋಡಿ ನಮ್ಮೆಲ್ಲರಿಗೂ ಕೇಳಿಸುವಂತೆ 'ಝುತ್‌ಅಮಿ ಎನ್ನುತ್ತಾರೆ, ಯೂ ನಾಟಿ ಗರ್ಲ್ಸ್' ಎಂದು ನಕ್ಕುಬಿಟ್ಟರು.

ಇಷ್ಟು ಕಷ್ಟಪಡುವುದೇನಿತ್ತು. ಇಂಟರ್ನೆಟ್ಟಿನಲ್ಲಿ ಒಮ್ಮೆ ಕಂಟ್ರೋಲ್- ಎಂಟರ್ ಒತ್ತಿದರೆ ಫ್ರೆಂಚೇನು ಇನ್ನುಳಿದ ಎಲ್ಲ ಭಾಷೆಗಳಲ್ಲೂ ಐ ಲವ್ ಯೂ ಎನ್ನಲು ಏನೆನ್ನುತ್ತಾರೆ ಅನ್ನುವುದಕ್ಕೆ ಉತ್ತರ ಸಿಗುತ್ತಿತ್ತಲ್ಲ ಅಂತ ನೀವು ಹೇಳಬಹುದು. ಆದರೆ ಯಂತ್ರವೊಂದರ ಮುಂದೆ ಕುಳಿತು ಆಗಲೇ ಫೀಡ್ ಆಗಿದ್ದ ಉತ್ತರ ದೊರಕಿಸಿಕೊಳ್ಳುವುದಕ್ಕೂ, ಓಪನ್ ಕ್ಲಾಸಿನಲ್ಲಿ ಹೀಗೆ ಸವಾಲೆಸೆದು ಟ್ಯೂಟರ್ ಹತ್ತಿರ ಉತ್ತರ ತೆಗೆದುಕೊಳ್ಳುವುದಕ್ಕೂ ವ್ಯತ್ಯಾಸ ಇದೆ ಅಲ್ಲವೇ? ಝುತ್‌ಅಮಿ ಫ್ರೆಂಚ್!!





Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## *ಏನೀ ಜೀವನ ಪಯಣ ?...*



ಅನುರಾಧ ದೀಪಕ್

"ಈ ಜಗಕೆ ನಾನೇಕೆ ಬಂದಿಹೆನೋ,
ತಿಳಿಯದದು ಎಲ್ಲಿಂದ ಬಂದೆನೋ ! ಪೋಪುದಾವೆಡೆಗೋ !
ಇಚ್ಛೆ ಕೇಳುವರಿಲ್ಲ ; ಗುಟ್ಟು ಬಿಚ್ಚುವರಿಲ್ಲ "
ಹುಟ್ಟುವುದೆಲ್ಲೋ ಬೆಳೆಯುವುದೆಲ್ಲೋ
ಸಾಗುವುದೆಲ್ಲೂ ಸೇರುವುದೆಲ್ಲೊ!..
ಏನು ಜೀವನದರ್ಥ ? ಏನು ಪ್ರಪಂಚಾರ್ಥ ? |
ಏನು ಜೀವಪ್ರಪಂಚಗಳ ಸಂಬಂಧ ? ||
ಕಾಣದಿಲ್ಲಿರ್ಪುದೇನಾನುಮುಂಟೆ ? ಅದೇನು?|
ಜ್ಞಾನ ಪ್ರಮಾಣವೇಂ __ ? ಮಂಕುತಿಮ್ಮ ||

ಈ ಯಾವ ಪ್ರಶ್ನೆಗೂ ಉತ್ತರ ತಿಳಿಯದೆಯೇ ಸಾಗುತ್ತಿದೆ ಮಾನವನ ಜೀವನ ತಲೆತಲಾಂತರಗಳಿಂದ... ಇನ್ನೆಷ್ಟು ತಲೆಮಾರುಗಳು ಕಳೆಯಬೇಕಾಗಿದೆಯೋ ಅದೂ ಕೂಡಾ ತಿಳಿಯದು.

ಜೀವನದ ನಿಘಂಟನ್ನು ಕೆದಕುವ ಪ್ರಯತ್ನ ೨೧ನೇ ಶತಮಾನದಲ್ಲೂ ಭರದಿಂದ ಸಾಗುತ್ತಿದೆ. ಚಿಂತನಾಶೀಲನಾದವನಲ್ಲದೆ ಸಾಮಾನ್ಯ ಮನುಷ್ಯನನ್ನು ಕೂಡ ಎಂದಾದರೂ ಒಂದುದಿನ, ಕ್ಷಣ ಕಾಲಕ್ಕಾದರೂ ಕಾಡುವುದು ಸಹಜ. ಆದರೆ ಪ್ರತಿಯೊಬ್ಬನನ್ನು ಕ್ಷಣ ಕ್ಷಣಕ್ಕೂ ಕಾಡಿದ್ದಿದ್ದರೆ ಪ್ರಾಯಶಃ ಮಾನವನ ಜೀವನ ಪಯಣ ಈ ಮಟ್ಟದವರೆಗೆ ಸಾಗುತ್ತಿತ್ತೋ ಇಲ್ಲವೋ..

ಮಾನವನ ಮನಸ್ಸು ಚಂಚಲ, ಕ್ಷಣ ಕ್ಷಣಕ್ಕೂ ಚಿಂತೆಗಳು, ಆಲೋಚನೆಗಳು, ಅನಿಸಿಕೆಗಳು, ಆಕಾಂಕ್ಷೆಗಳು ಬದಲಾಗುತ್ತಿರುತ್ತದೆ. ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಸಮಸ್ಯೆಗಳು ಹೆಚ್ಚಾದಾಗ, ಸಹಿಸಲಾರದಷ್ಟು ಮಾನಸಿಕ ಒತ್ತಡಕ್ಕೆ ಸಿಲುಕಿದಾಗ ಸಾಮಾನ್ಯವಾಗಿ ಎಲ್ಲರನ್ನು ಕಾಡುವ ಪ್ರಶ್ನೆ, "ಪ್ರಪಂಚದಲ್ಲಿರುವ ಸಮಸ್ಯೆಗಳೆಲ್ಲ ನನಗೇ ಏಕೆ ಬರುತ್ತದೆ "??, ಈ ಭೂಮಿಮೇಲೆ ನಾನೊಬ್ಬನೇ ನತದೃಷ್ಟ, ನಾನು ಹುಟ್ಟಿದ್ದು ಕಷ್ಟಪಡುವುದಕ್ಕಷ್ಟೇ, ಈ ಹಾಳು ಜೀವನ ಬೇಕು ಎಂದು ಯಾರು ಅಳುತ್ತಿದ್ದರು, ಯಾವ ಮನೆಯೂ ಬೇಡ ಮಠವೂ ಬೇಡ, ಒಡವೆ ವಸ್ತುಗಳು ಬೇಡ, ಯಾವ ವೈಭೋಗವೂ ಬೇಡ, ಯಾವುದರ ಮೇಲೂ ವ್ಯಾಮೋಹ ಬೇಡ, ಕನಸು ಹುದ್ದೆಗಳ ಹಿಂದೆ ಓಡುವುದು ಬೇಡ, ಮರುದಿನ ಬೆಳಗಾಗುವುದೇ ಬೇಡ ಹೀಗೆ ಒಂದೇ ಎರಡೇ ಇನ್ನು ಹಲವಾರು ರೀತಿಯಲ್ಲಿ ಬಡಬಡಿಸಿ ಪ್ರಪಂಚ ತಲೆಕೆಳಗಾದಂತೆ ವರ್ತಿಸುತ್ತೇವೆ.ಮನಸ್ಸಿನಲ್ಲಿ ಎಷ್ಟೇ ಚಿಂತೆ ಕಾಡಿದರು ದೇಹಕ್ಕೆ ದಣಿವಾದ ಕೂಡಲೇ ಸಹಜವಾಗಿ ಕಣ್ಣು ಮುಚ್ಚಿ ಕನಸು ಕಾಣಲು ಪ್ರಾರಂಭಿಸುತ್ತೇವೆ.

ಮರುದಿನ ಬೆಳಗಾಯಿತೆಂದರೆ ಯಾಂತ್ರಿಕವಾಗಿ ದಿನನಿತ್ಯದ ಕಾರ್ಯಗಳಲ್ಲಿ ತೊಡಗಿ ಸಮಯ ಸಿಕ್ಕಾಗ ಮೊಬೈಲ್ ಫೋನ್ ಹಿಡಿದು ಕೂತರೆ ವಾಟ್ಸಪ್ ನಲ್ಲಿ ತುಂಬಿರುವ ಮೇಸೇಜ್ಗಳಿಗೆ ಉತ್ತರ ಕೊಡುವುದರಲ್ಲಿ, ಫೇಸ್ಬುಕ್ ನಲ್ಲಿ ಕಾಮೆಂಟ್ ಮಾಡುವುದರಲ್ಲಿ, ಇ-ಮೆಲ್ ಕೂಪನ್ ಕಂಡಕೂಡಲೇ ಆನ್ಲೈನ್ ಶಾಪಿಂಗ್ ನಲ್ಲಿ ಬ್ಯುಸಿ ಆಗಿಬಿಡುತ್ತೇವೆ. ಹಿಂದಿನದಿನದ ಚಿಂತೆ ಮರೆತೇಹೋಗುತ್ತದೆ. ಅಪ್ಪಿತಪ್ಪಿ ಜ್ಞಾಪಕ ಬಂದರೂ ಅಯ್ಯೋ ಹೋಗಲಿ ಬಿಡು ನನ್ನ ಹಣೆಬರಹ ಇಷ್ಟೇ ಎಂದು ತಳ್ಳಿಹಾಕುತ್ತೇವೆ. ಇದು ಮಾನವನ ಸಹಜ ಗುಣ. ಮಾನವನಲ್ಲಿ ಚಂಚಲತೆ ಮತ್ತು ಮರುಕ್ಷಣ ಏನಾಗಬಹುದು ಎಂಬ ಕುತೂಹಲ ಇಲ್ಲದಿದ್ದರೆ, ಪ್ರಾಯಶಃ ಮನುಜಕುಲ ಈ ಬೃಹತ್ ತಂತ್ರಜ್ಞಾನದ ಸಮಯಕ್ಕೆ ತಲುಪುತ್ತಿತ್ತೋ ಇಲ್ಲವೋ!

ಏನೀ ಜೀವನ ಪಯಣ ಎನ್ನುವುದಕ್ಕೆ ಆ ಸೃಷ್ಟಿಕರ್ತನ ಉತ್ತರ ಪ್ರಾಯಶಃ ಸಂಯಮವಿರಲಿ ಕಾದುನೋಡಿ! ಎಂದಿರಬೇಕು.






## ಯುವ ವಾಣಿ

ಮಕ್ಕಳ ಲ್ಯುಕೇಮಿಯ ಮತ್ತು ಲಿಮ್ಫೋಮ ಚಾರಿಟಿ ಕಾರ್ಯಕ್ರಮ :

(Live For the Moment— Children's Leukemia and Lymphoma Fund raising program **LFTM**)






## ಕವನ

### *.. ಒಂದು ಮಾತು ಮಡದಿಗೆ....*



ಲಕ್ಷ್ಮಿ ಕೊಲಾಲ್

ಕೊಡೆ ಕೊಡೆ ಕೊಡೆ ಕೋಡುಬಳೆಗಳಾ ಕೊಡೆ
ಬಿಡೆ ಬಿಡೆ ಬಿಡೆ ಬಂಗಾರದ ಬಳೆಗಳ ಬಿಡೆ

ಮೈಸೂರು ಪಾಕು ಎಲ್ಲಿ ?ಹೇಳು ಬೇಗ
ಈ ಸುಂದರ ವದನವಾ ನೀ ತೆಗಳಬೇಡಾ..

ರವೆವುಂಡೆಗಳನ್ನು ಉರುಳಿಸು
ಕುಡಿನೋಟವನ್ನತ್ತ ಕೊಂಚ ತಿರುಗಿಸು

ದ್ರಾಕ್ಷಿ ಖರ್ಜೂರಗಳ ಭಂಡಾರ
ನನ್ನೀ ಸಂಜೆಯಾ ಉಪಹಾರ

ಇರುಳ ಊಟೋಪಚಾರದ ಕಥೆಯ ಹೇಳು
ಮುಂಗುರುಳ ಸರಿಸು ...ಮಡದಿಯೇ ನನ್ನ ಮಾತು ಕೇಳು.


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಪುಸ್ತಕ ವಿಮರ್ಶೆ

### “ಕುಂದಗನ್ನಡ ಗಾದೆಗಳು

ಸಂಗ್ರಹ : ಬಿ. ಲೀಲಾವತಿ ಅಡಿಗ    ವ್ಯಾಖ್ಯಾನ : ಡಾ. ಅನುಸೂಯಾದೇವಿ



ಉಮಾ ಕಾರಂತ್


ಅದೊಂದು ದಿನ ಕೃಷ್ಣ ಮಠದ ಸಮಾರಂಭದಲ್ಲಿ ಪ್ರಸಾದಕ್ಕೆಂದು ಸರದಿಯಲ್ಲಿ ನಿಂತಾಗ ಉಷಾ ಬಸ್ರೂರು ಅವರು ನಮ್ಮ ಮುಂದೆಯೇ ನಿಂತಿದ್ದರು. ನಮ್ಮೂರಿನವರನ್ನು ನೋಡುತ್ತಿದ್ದಂತೆ ಭಾಷೆ ಬದಲಾಯಿತು. "ಹೋಯ್, ಹ್ಯಾಂಗಿದ್ರಿಯೇ?" ಎಂದು ಕುಂದಾಪುರ ಭಾಷೆ ಶುರು ಮಾಡಿಕೊಂಡೆವು. ಉಭಯ ಕುಶಲೋಪರಿ ನಂತರ ನನ್ನ ಗಮನ ಸೆಳೆದದ್ದು ಅವರ ಕೈಯಲ್ಲಿದ್ದ ಪುಸ್ತಕ "ಕುಂದಗನ್ನಡ ಗಾದೆಗಳು". ಆಗ ಉಷಾ ಸಂತೋಷದಿಂದ ಹೇಳಿದ್ದು, "ನನ್ನ ಅಮ್ಮ ಸದಾ ಗಾದೆ ಮಾತು ಹೇಳುತ್ರು.ಅವರ ಸ್ನೇಹಿತೆ ಎಲ್ಲವನ್ನೂ ಸಂಗ್ರಹಿಸಲು ಸಲಹೆ ನೀಡಿ ವ್ಯಾಖ್ಯಾನ ನೀಡಿದರು. ಇಲ್ಲಿಗೆ ಯಾರೋ ಒಬ್ಬರಿಗೆ ಕೊಡೋಕೆ ತಗಬಂದೆ" ಅಂತ. ನನ್ನ ಆಸಕ್ತಿಯನ್ನು ಗಮನಿಸಿ ಉದಾರವಾಗಿ ನನಗೂ ಒಂದು ಪುಸ್ತಕ ಕೊಟ್ಟಾಗ ಹೇಳಲಾರದ ಸಂತೋಷ. ಸುಂದರ ಮುಖಪುಟವನ್ನು ಮುಟ್ಟಿದಾಗ ನಮ್ಮ ಕುಂದಾಪುರ ಮಲ್ಲಿಗೆಯ ಪರಿಮಳ ನೆನಪಾಯಿತು.

"ಕುಂದಗನ್ನಡ ಗಾದೆಗಳು" ಶ್ರೀಮತಿ ಬಿ. ಲೀಲಾವತಿ ಅಡಿಗರ ೪೬೦ ಗಾದೆಗಳ ಸಂಗ್ರಹ. ಜೊತೆಯಲ್ಲಿ ಡಾ.ಅನುಸೂಯಾದೇವಿಯವರ ವಿವರಣೆ. ಗಾದೆಗಳ ಸಂಗ್ರಹ ಸಿಗಬಹುದೇನೋ. ಆದರೆ ಕುಂದಗನ್ನಡ ಪ್ರಾದೇಶಿಕ ಭಾಷೆಯಲ್ಲಿ ವ್ಯಾಖ್ಯಾನದೊಂದಿಗೆ ಬರೆದಿರುವುದು ಇದೇ ಪ್ರಥಮ ಅನಿಸುತ್ತದೆ. ಇದು ಈ ಇಬ್ಬರೂ ಲೇಖಕಿಯರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ. ಕುಂದಗನ್ನಡ ಅಥವಾ ಕುಂದಾಪುರ ಕನ್ನಡ ಬ್ರಹ್ಮಾವರದಿಂದ ಬೈಂದೂರಿನವರೆಗೂ ಕುಂದಾಪುರ ತಾಲೂಕಿನಾದ್ಯಂತ ಮಾತಾಡುವ ಕನ್ನಡ. ಕುಂದವೆಂದರೆ ಮಲ್ಲಿಗೆ. ಮಲ್ಲಿಗೆ ಬೆಳೆಸುವವರ ಆಡುಭಾಷೆ. ಮಂಡ್ಯ, ಹುಬ್ಬಳ್ಳಿ, ಮಂಗಳೂರು ಕನ್ನಡವನ್ನು ಸಿನೆಮಾ ಮಾಧ್ಯಮದಲ್ಲಿ ಬಳಸಿದಷ್ಟು ಕುಂದಗನ್ನಡ ಬಳಕೆಯಾಗಿಲ್ಲ. ಗುಲ್ವಾಡಿ ವೆಂಕಟ ರಾವ್ ಅವರ ಕಾದಂಬರಿಯಲ್ಲಿ, ಗಿರೀಶ್ ಕಾಸರವಳ್ಳಿಯವರ "ಗುಲಾಬಿ ಟಾಕೀಸ್", ರಕ್ಷಿತ್ ಶೆಟ್ಟಿಯವರ "ಉಳಿದವರು ಕಂಡಂತೆ" ಚಿತ್ರಗಳಲ್ಲಿ, ಹಾಗೂ ಇತ್ತೀಚೆಗೆ WhatsApp ನಲ್ಲಿ ಕಾಣಿಸಿಕೊಳ್ಳುವ ಮನು ಹಂದಾಡಿಯವರ audio clip ಗಳಲ್ಲಿ ಕುಂದಗನ್ನಡ ಸವಿಯಬಹುದಾಗಿದೆ. ಇನ್ನು ಗಾದೆಗಳು ಸರ್ವಜ್ಞನ ವಚನಗಳಂತೆ, ಜನರಿಂದ ಜನರಿಗೆ ಅನುಭವದ ಕಡಲಿನಿಂದ ಕಡೆದ ಅಮೃತ ಎನ್ನಬಹುದು.

ಕುಂದಗನ್ನಡ ಗಾದೆಗಳು ಕನ್ನಡದ ಇತರ ಗಾದೆಗಳಂತೆಯೇ ಆದರೂ ಕುಂದಗನ್ನಡದಲ್ಲಿ ದಾಖಲಿಸಲಾಗಿದೆ. ಇದು ಬರೇ 460 ಗಾದೆಗಳಿಗೆ ಸೀಮಿತವಾಗಿಲ್ಲ. ಶ್ರೀಮತಿ ಅನುಸೂಯ ದೇವಿಯವರ ವ್ಯಾಖ್ಯಾನದಲ್ಲಿ ಪೂರಕವಾದ ಹತ್ತು ಹಲವು ಕನ್ನಡ, ಸಂಸ್ಕೃತ ಹಾಗೂ ಇಂಗ್ಲೀಷ್ ಭಾಷೆಗಳ ಗಾದೆಗಳನ್ನು ಉದಾಹರಿಸಲಾಗಿದೆ. ಹೆಚ್ಚಿನ ಕುಂದಗನ್ನಡದ ಗಾದೆಗಳಿಗೆ, ಉದಾ: "ಆಪುದ್ ಆತ್ ಹೋಪುದ್ ಹೋತ್ ಸಾಪ್ ಮಾಡ್ತಾ ಕೂಕಂಬಕಾತ್", "ನಾಳಿ ಹೊಟ್ಟೆಯವ ಉಂಡುದ್ದು ತಿಳ್ಯ, ಗೊಗ್ರಹಲ್ಲಿನವ ಪ್ರಾಣ ಬಿಟ್ಟದ್ದು ತಿಳ್ಯ", "ಅಂಚು ಮೆಟ್ಟಿ, ಅರು ಮೆಟ್ಟಿ ನಡುಗದ್ದೆಗೆ ಬಪ್ಪರು" ಇವೆಲ್ಲಕ್ಕೂ ಪದಗಳ ಅರ್ಥ ಬಿಡಿಸಿ ವ್ಯಾಖ್ಯಾನಿಸಲಾಗಿದೆ. ಇದರೊಂದಿಗೆ ಕೆಲವೊಂದು ತಮಾಷೆಯ ಗಾದೆಗಳು ಗಮನ ಸೆಳೆಯುತ್ತವೆ. "ಮಕ್ಕಳನ್ನು ಹುಗಿದಲ್ಲಿ ನನ್ನನ್ನು ಹುಗೀಬೇಡ", "ಮಳಿಗಾಲದ ಮಳಿ ನಂಬೂಕೆಡ್ಯ, ಗಂಡಸರ ನಗಿ ನಂಬೂಕೆಡ್ಯ", "ಬರೆದೂ ಬರೆದು ಶ್ಯಾನುಭೋಗ, ಬೊಗಳೀ ಬೊಗಳಿ ಭಾಗೋತ". ಓದುತ್ತಾ ಓದುತ್ತಾ ಮನಸ್ಸು ಹಿಂದೆ ಕೇಳಿದ, ನಡೆದ ಘಟನೆಗಳನ್ನು ನೆನಪಿಸಿತು.

ನಮ್ಮ ಅಜ್ಜಿ ಮನೆಗೆ ಅವರ ಅಳಿಯ ಅಂದರೆ ನಮ್ಮ ಮಾವ ಬಂದರಂತೆ. ಆಗ ಯಾರೋ ಒಬ್ಬರು, "ದೊಡ್ಡಮ್ಮ, ಅಳಿಯ ಬಂದಿರು" ಅಂದರಂತೆ. ಕೂಡಲೇ ಅಜ್ಜಿ, "ಅಳಿಯ ಮನಿ ತೊಳಿಯ" ಎಂದು ಹೇಳಿಯೇ ಬಿಟ್ಟರು. ನಮ್ಮ ಮಾವನೂ ಏನೂ ಕಡಿಮೆ ಇಲ್ಲದಂತೆ ಅವರ ಅತ್ತೆಗೆ, "ಹೆಚ್ಚಿಗೆ ಮಾತಾಡಿದ್ರೆ ಇತ್ತ ಕಡೆ ಸುಳಿಯ" ಎಂದು ಅಜ್ಜಿಯ ಬಾಯಿ ಮುಚ್ಚಿಸಿದರಂತೆ.

ನಮ್ಮ ಶಿಕ್ಶಕರೊಬ್ಬರು ಯಾರೇ ತಪ್ಪು ಉತ್ತರ ಕೊಟ್ಟರೂ ಹೇಳುತ್ತಿದ್ದ ಗಾದೆ, "ಉಂಡ್ಯಾನ ಮಾಣಿ ಅಂದ್ರೆ ಮುಂಡಾಸ್ ಮೂವತ್ತು ಮೊಳ ಅಂತ ಯಾವುದಕ್ಕೆ ಯಾವುದೋ ಉತ್ತರ ಕೊಡ್ತೀಯಾ?" ಅಂತ ಬೈತಾ ಇದ್ದರು. ಕೆಲವೊಂದು ಗಾದೆಗಳಾದ "ಸಂಸಾರ ಗುಟ್ಟು ವ್ಯಾದಿ ರಟ್ಟು", "ಕತ್ತೆಗೆಂತ ಗೊತಾತ್ ಕಸ್ತೂರಿ ಪರಿಮಳ" ವ್ಯಾಖ್ಯಾನದಲ್ಲಿ ಉಲ್ಲೇಖಿಸಿದ ಸಂಧರ್ಭಗಳು ನನ್ನ ಹಿರಿಯರು ಉಪಯೋಗಿಸುವುದಕ್ಕಿಂತ ವಿಭಿನ್ನವಾಗಿದೆಯೆಂದೆನಿಸಿತು.




ಮಕ್ಕಳು ಕನ್ನಡ ಮಾತಾಡುವುದೇ ಹೆಚ್ಚು ಎಂದುಕೊಂಡಿದ್ದ ನನಗೆ ಇನ್ನು ಮುಂದೆ ಗಾದೆಗಳನ್ನು ಉಪಯೋಗಿಸಬೇಕೆಂದಿನಿಸಿದ್ದು ಈ ಕೆಳಗಿನ ಗಾದೆಗಳನ್ನು ಓದಿದಾಗ.

**"ನಮ್ಮವ್ರು ಬೈದ್ ಹೇಳುತ್ರು, ಬೇರೆಯವರು ನೆಗಾಡ್ಕಂಡ್ ಹೇಳುತ್ರು ".**

**"ನಮ್ಮ ನೆರಳಿಗೆ ನಾವೇ ಹೆದರ್ಕ್".**

**"ಮುತ್ತು ಬಿದ್ರೆ ಹೆಕ್ಕಲಕ್ಕು, ಮಾತು ಬಿದ್ರೆ ಹೆಕ್ಕುಕಾತಿಲ್ಲ".**

ಇಡೀ ಪುಸ್ತಕವನ್ನು ಓದಿ ಮುಗಿಸಿದಾಗ ಉಷಾ ಬಸ್ರೂರು ಆಗಾಗ ಮಾತಿನ ಮಧ್ಯೆ ಗಾದೆ ಸೇರಿಸುತ್ತಾರಲ್ಲವೇ, "ತಾಯಿಯಂತೆ ಮಗಳು, ನೂಲಿನಂತೆ ಸೀರೆ" ಅಂದುಕೊಂಡೆ.

ಗಾದೆಗಳನ್ನು ಆರಿಸಿದ ರೀತಿಯಲ್ಲಾಗಲೀ, ವ್ಯಾಖ್ಯಾನ ನೀಡಿದ ರೀತಿಯಲ್ಲಾಗಲಿ ಕಂಡುಬರುವುದು ಲೇಖಕಿಯರ ಅನುಭವ, ಜೀವನದ ಬಗ್ಗೆ ಅವರಿಗಿರುವ ದೃಷ್ಟಿಕೋನ, ಬಂದದ್ದನ್ನು ಬಂದ ಹಾಗೆಯೇ ಸ್ವೀಕರಿಸಬೇಕೆನ್ನುವ ಸಾರ. ಇಷ್ಟೊಂದು ಗಾದೆಗಳನ್ನು ನೆನಪಿಸಿಕೊಂಡು ಸಂಗ್ರಹಿಸಿದ ಶ್ರೀಮತಿ ಲೀಲಾವತಿ ಅಡಿಗ ಹಾಗೂ ಅರ್ಥ ಮತ್ತು ಸಂಧರ್ಭ ಸಹಿತ ವಿವರಣೆ ನೀಡಿದ ಡಾ. ಅನುಸೂಯಾದೇವಿ ಯವರನ್ನು ಅಭಿನಂದಿಸಲೇ ಬೇಕು.

ಜನ ಜೀವನ, ಸಂಸ್ಕೃತಿ, ಭಾಷೆ ಅಧ್ಯಯನಕ್ಕೆ ಹೇಳಿ ಮಾಡಿಸಿದಂತಿರುವ ಈ ಪುಸ್ತಕವು ಕನ್ನಡ ಅಧ್ಯಯನ ಕ್ಷೇತ್ರದಲ್ಲಿ ಪಠ್ಯಪುಸ್ತಕವಾಗಿ, ಕನ್ನಡ ಭಾಷೆಯಲ್ಲಿರುವ ವಿವಿಧತೆ, ಆಳ ಎಲ್ಲರಿಗೂ ಪರಿಚಯಮಾಡಿಸಿ, ಕನ್ನಡ ಕಸ್ತೂರಿ ಪರಿಮಳ ಎಲ್ಲೆಲ್ಲೂ ಹರಡುವಂತಾಗಲಿ.

ಹಿಂದಿ, ಇಂಗ್ಲೀಷ್ ಗಾದೆಗಳನ್ನು ಜಾಸ್ತಿಯಾಗಿಯೇ ಬಳಸುವ ನಮ್ಮ ಕನ್ನಡಿಗರು ಹಿತ್ತಲ ಗಿಡದ ಮದ್ದನ್ನು ಗುರುತಿಸಿ ಕನ್ನಡ ಗಾದೆಗಳನ್ನು ಬಳಸುವಂತಾಗಲಿ ಎಂದು ಹಾರೈಕೆ.


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

**ಅಮೇರಿಕದ ಅನುಭವಗಳು**

## ಹೈಟ್ಸ್ ಆಫ್ ಜ್ಯಾಕ್ಸನ್ ಹೈಟ್ಸ್



ಭಾಸ್ಕರ ತೈಲಗೇರಿ

ಇದು ಸುಮಾರು ಇಪ್ಪತ್ತು ವರ್ಷಗಳ ಹಿಂದೆ ನಡೆದ ಘಟನೆ. ನಾನು ಅಮೆರಿಕಾಗೆ ಬಂದಿದ್ದು ಡಿಸೆಂಬರ್ ೧೯೯೬ ರಲ್ಲಿ. ನಾನು ಸೇರಿದ್ದ ಕನ್ಸಲ್ಟಿಂಗ್ ಕಂಪನಿ ಬಾಸ್ಟನ್ ಬಳಿಯ ಫ್ರೇಮಿಂಗ್ಹ್ಯಾಮ್ ನಲ್ಲಿ ಇತ್ತು. ಬಂದ ಎರಡು ವಾರದಲ್ಲಿ ಕನೆಕ್ಟಿಕಟ್ ನಲ್ಲಿ ಇರುವ ಒಂದು ಕ್ಲೈಂಟ್ ಕಂಪನಿಯಲ್ಲಿ ಲಾಂಗ್-ಟರ್ಮ್ ಪ್ರಾಜೆಕ್ಟ್ ಕೂಡ ಸಿಕ್ಕಿತು. ಜನವರಿ ಮೊದಲ ವಾರದಿಂದ ಕೆಲಸ ಶುರು ಅಂತ ತಿಳಿಸಿದರು. ಕನೆಕ್ಟಿಕಟ್ ಹೋಗಲು ಎಲ್ಲ ತಯಾರಿ ಮಾಡಿಕೊಳ್ಳಲು ಶುರು ಮಾಡಿದೆ. ಒಂದು ವಾರದ ಕೊನೆಯಲ್ಲಿ ನನ್ನ ಕನ್ಸಲ್ಟಿಂಗ್ ಕಂಪನಿಯ ಗೆಳೆಯರು ನ್ಯಾಶುವ ಗೆ ಹೋಗೋ ಪ್ಲಾನ್ ಮಾಡಿದರು. "ನ್ಯಾಶುವ" ನ್ಯೂಹ್ಯಾಂಪ್ಶೈರ್ ರಾಜ್ಯದ ಒಂದು ಸಣ್ಣ ಊರು ಹಾಗು ಮೆಸ್ಸಾಚುಸೆಟ್ಸ್ ಬಾರ್ಡರ್ ನಲ್ಲಿ ಇದೆ. ನ್ಯೂಹ್ಯಾಂಪ್ಶೈರ್ ರಾಜ್ಯದಲ್ಲಿ ಸ್ಟೇಟ್ ಟ್ಯಾಕ್ಸ್ ಇಲ್ಲ. ಹಾಗಾಗಿ ಸುಮಾರು ಮೆಸ್ಸಾಚುಸೆಟ್ಸ್ ನಿವಾಸಿಗಳು ನ್ಯೂಹ್ಯಾಂಪ್ಶೈರ್ ಗೆ ಶಾಪಿಂಗ್ ಮಾಡಲು ಹೋಗುತ್ತಾರೆ. ಹಾಗೆ ನಾವು ನ್ಯಾಶುವಗೆ ಶಾಪಿಂಗ್ ಮಾಡಲು ಹೋದೆವು.

ಅಮೆರಿಕಾಗೆ ಬಂದು ಹತ್ತು ದಿನವಾಗಿತ್ತು ಅಷ್ಟೇ. ಇನ್ನೂ ಕನೆಕ್ಟಿಕಟ್ ನಲ್ಲಿ ಅಪಾರ್ಟ್ಮೆಂಟ್ ಬುಕ್ ಮಾಡಿರಲಿಲ್ಲ. ಏನು ಕೊಂಡುಕೊಳ್ಳಬೇಕೆಂದು ಯೋಚಿಸುತ್ತಿದ್ದ ನಾನು, ಕ್ಯಾಲಿಫೋರ್ನಿಯಾನಲ್ಲಿ ಇರುವ ನನ್ನ ತಂಗಿಗೆ ಫೋನ್ ಮಾಡಿ ಕೇಳಿದೆ. ಅವಳು ಒಂದು ಮೈಕ್ರೋವೇವ್ ಓವನ್ ಖರೀದಿಸು, ಖಂಡಿತ ಉಪಯೋಗಕ್ಕೆ ಬರುತ್ತೆ, ಬಹಳಷ್ಟು ಅಪಾರ್ಟ್ಮೆಂಟ್ ಗಳಲ್ಲಿ ಮೈಕ್ರೋವೇವ್ ಓವನ್ ಇರೋದಿಲ್ಲ ಅಂತ ಹೇಳಿದಳು. ಅಮೇರಿಕಾದಲ್ಲಿ ಅದೂ ನ್ಯಾಶುವಗೆ ಶಾಪಿಂಗ್ನಲ್ಲಿ ನಾನು ಕೊಂಡ ಮೊದಲ ವಸ್ತು ಈ "ಮೈಕ್ರೋವೇವ್ ಓವನ್" -ಶಾರ್ಪ್ ೧೦೦೦ ವಾಟ್ಸ್. ಯಾವ ಮಳಿಗೆ ಅಂತ ಮರೆತು ಹೋಗಿದೆ.

ಜನವರಿ ಮೊದಲ ವಾರದಲ್ಲಿ ಕನೆಕ್ಟಿಕಟ್ ಹೋಗಿ ಒಂದು ಅಪಾರ್ಟ್ಮೆಂಟ್ ಗೊತ್ತು ಮಾಡಿ ವಾಸಿಸಲು ಶುರು ಮಾಡಿದೆ. ಮೈಕ್ರೋವೇವ್ ಓವನ್ ದಿನಾಲೂ ಉಪಯೋಗಿಸುತ್ತಿದ್ದೆವು. ಒಂದೆರಡು ತಿಂಗಳುಗಳ ನಂತರ, ನನ್ನ ಖಾಸಾ ಸ್ನೇಹಿತನೊಬ್ಬ ಫೋನ್ ಮಾಡಿ ಅವನ ಮಗಳ ಮೊದಲ ಜನ್ಮ ದಿನಾಚರಣೆ ಆಹ್ವಾನಿಸಿದ. ಹಾಗೆಯೇ ಕಾರ್ಯಕ್ರಮ ನಡೆಯುವ ಹಾಲಿನಲ್ಲಿ ಮೈಕ್ರೋವೇವ್ ಓವನ್ ಇರಲಿಲ್ಲವಾದ್ದರಿಂದ, ನನ್ನ ಹೊಸ ಮೈಕ್ರೋವೇವ್ ಓವನ್ ತರಲು ವಿನಂತಿಸಿಕೊಂಡ. (ನನ್ನ ಸ್ನೇಹಿತನ ಮನೆಯಲ್ಲಿ ಓವನ್ ಫಿಕ್ಸ್ ಆಗಿತ್ತು). ನಾನು ತರುತ್ತೇನೆ ಅಂತ ಒಪ್ಪಿಕೊಂಡೆ.

ನನ್ನ ಸ್ನೇಹಿತ ಇದ್ದಿದ್ದು ನ್ಯೂಯಾರ್ಕ್ ರಾಜ್ಯದ ವೆಸ್ಟ್ಚೆಸ್ಟರ್ ಕೌಂಟಿಯಲ್ಲಿರುವ ಪ್ಲೆಸೆಂಟ್ವಿಲ್ ನಲ್ಲಿ. ನನ್ನ ಇನ್ನಿಬರು ಗೆಳೆಯರ ಜೊತೆ ನನ್ನ "ನಿಸ್ಸಾನ್ ಸೆಂಟ್ರಾ ಹ್ಯಾಚ್ ಬ್ಯಾಕ್" ಕಾರಿನಲ್ಲಿ ಹೋಗುವುದು ಅಂತ ತೀರ್ಮಾನವಾಯಿತು. ನನ್ನ ಗೆಳೆಯರು ಹೇಗೂ ಅಷ್ಟು ದೂರ ಹೋಗ್ತಾ ಇದ್ದೀವಿ, ಹಾಗೆಯೇ ಜ್ಯಾಕ್ಸನ್ ಹೈಟ್ಸ್ ಹೋಗಿ ಬರೋಣ ಅಂದರು. ನಾನು ಸರಿ ಎಂದು ಸಮ್ಮತಿ ಸೂಚಿಸಿದೆ. ಬರ್ತ್ಡೇ ಪಾರ್ಟಿ ಸಂಜೆಯಿದ್ದದ್ದರಿಂದ, ಜ್ಯಾಕ್ಸನ್ ಹೈಟ್ಸ್ ನಲ್ಲಿ ಏನಾದ್ರು ಶಾಪಿಂಗ್ ಮಾಡಿ, ಇಂಡಿಯನ್ ರೆಸ್ಟೋರೆಂಟ್ ನಲ್ಲಿ ಊಟ ಮಾಡಿ ಸಂಜೆ ವೇಳೆಗೆ ಪ್ಲೆಸೆಂಟ್ ವಿಲ್ ತಲುಪಲು ಪ್ಲಾನ್ ಮಾಡಿದೆವು.



ಹೊರಡುವ ದಿನ ಮೈಕ್ರೋವೇವ್ ಓವನ್ ನ್ನು ಕಾರ್ ಗೆ ಲೋಡ್ ಮಾಡಿ, ನನ್ನ ಕಾರ್ ಹ್ಯಾಚ್ ಬ್ಯಾಕ್ ವಾಗಿದ್ದರಿಂದ, ಡಿಕ್ಕಿಯಲ್ಲಿ ಯಾವುದೇ ವಸ್ತು ಇಟ್ಟರೆ, ರೇರ್ ವಿಂಡೋದಿಂದ ಕಾಣಬಾರದೆಂದು ಮೈಕ್ರೋವೇವ್ ಓವನ್ ಮೇಲೆ ಒಂದು ಹಳೆಯ ಬೆಡ್ ಶೀಟ್ ಒಂದನ್ನು ಹೊದಿಸಿದ್ದೆ. ಎರಡು ಗಂಟೆ ಪ್ರಯಾಣದ ನಂತರ ಜ್ಯಾಕ್ಸನ್ ಹೈಟ್ಸ್ ತಲುಪಿದೆವು. ಜ್ಯಾಕ್ಸನ್ ಹೈಟ್ಸ್ ಒಂದು ತರಹ ಕ್ವೀನ್ಸ್ ನ ಓಕ್ ಟ್ರೀ ರೋಡ್ ಅಂತ ಹೇಳಬಹುದು. ೪-೫ ರಸ್ತೆಗಳ ತುಂಬಾ ಭಾರತೀಯ ದಿನಸಿ ಅಂಗಡಿಗಳು, ಚಿನ್ನದ ಒಡವೆ ಮಳಿಗೆಗಳು, ರೆಸ್ಟೋರೆಂಟ್ ಗಳು ಮತ್ತು ಇನ್ನೂ ಅನೇಕ ಭಾರತೀಯ, ಪಾಕಿಸ್ತಾನ ಮತ್ತು ಬಾಂಗ್ಲಾದೇಶ ಅಂಗಡಿಗಳು. ವೀಕೆಂಡ್ ಆಗಿದ್ದರಿಂದ ಪಾರ್ಕಿಂಗ್ ಸಿಗುವುದು ಕಷ್ಟ. ನಮ್ಮ ಅದೃಷ್ಟವೇನೋ ೨-೩ ರೌಂಡ್ ಹೊಡೆದ ನಂತರ ರೋಡ್ ಸೈಡ್ ಪಾರ್ಕಿಂಗ್ ಸಿಕ್ಕಿತು.

ನನ್ನ ಜೊತೆ ಬಂದಿದ್ದ ಗೆಳೆಯನೊಬ್ಬ ಭಾರತಕ್ಕೆ ಹೋಗುವ ಪ್ಲಾನ್ ಇತ್ತು. ಅವನು ಒಂದು ಚಿನ್ನದ ನಾಣ್ಯ ಕೊಂಡುಕೊಳ್ಳಬೇಕೆಂದು ಒಂದು ಚಿನ್ನದ ಮಳಿಗೆ ಹೋದೆವು. ಅಲ್ಲಿ ಇಪ್ಪತ್ತು ನಿಮಿಷ ಇದ್ವಿ ಅನಿಸುತ್ತೆ. ನಮ್ಮ ಕಾರ್ ಹತ್ತಿರ ಬಂದು ನೋಡಿದರೆ, ಹಿಂದಿನ ರೇರ್ ವಿಂಡ್ ಸ್ಕ್ರೀನ್ ನಿಂದ ಬರಿ ಬೆಡ್ಶೀಟ್ ಕಾಣ್ತಾ ಇದೆ, ಮೈಕ್ರೋವೇವ್ ಓವನ್ ನಾಪತ್ತೆ. ನಾನು ಡಿಕ್ಕಿ ಲಾಕ್ ಮಾಡಿದ ನೆನಪು. ಅಷ್ಟು ದೊಡ್ಡ ಮೈಕ್ರೋವೇವ್ ಓವನ್ ಕದಿಯೋದಾದ್ರು ಹೇಗೆ. ಇನ್ನೂ ಅಮೇರಿಕಾಗೆ ಬಂದು ನಾಲ್ಕು ತಿಂಗಳಾಗಿರಲಿಲ್ಲ, ಆಗಲೇ ಈ ತರಹದ ಅನುಭವ. ಪೊಲೀಸ್ ಕಂಪ್ಲೇಂಟ್ ಕೊಡೋಣ ಅಂತ ಡಿಸೈಡ್ ಮಾಡಿದೆವು. ಆಗ ಅಲ್ಲೇ ಇದ್ದ ಅಂಗಡಿಯವನು ಇಲ್ಲಿ ಇದೆಲ್ಲ ಮಾಮೂಲು, ಪೊಲೀಸ್ ಕಂಪ್ಲೇಂಟ್ ನಿಂದ ಏನು ಉಪಯೋಗವಿಲ್ಲ ಎಂದರು. ನಾವು ಹ್ಯಾಪ್ ಮೋರೆ ಹಾಕೊಂಡು ಪ್ಲೆಸೆಂಟ್ ವಿಲ್ ನಲ್ಲಿ ಇರುವ ಸ್ನೇಹಿತನಿಗೆ ಫೋನ್ ಮಾಡಿ ಆದ ವಿಷಯ ತಿಳಿಸಿ ಬೇರೆ ಯಾರದ್ರೂ ಬಳಿ ಮೈಕ್ರೋವೇವ್ ಓವನ್ ಅರೆಂಜ್ ಮಾಡಿಕೊ ಅಂತ ಹೇಳಿದೆ. ಅವನಿಗೂ ತುಂಬಾ ಬೇಜಾರಾಯಿತು. ಈ ಘಟನೆಯ ನಂತರ ಜ್ಯಾಕ್ಸನ್ ಹೈಟ್ಸ್ ಕಡೆ ತಲೆ ಹಾಕಿ ಮಲಗಿಲ್ಲ.

ನನ್ನ ಇನ್ನೊಬ್ಬ ಸ್ನೇಹಿತನಿಗೆ ಈ ಘಟನೆಯನ್ನು ಹೇಳಿದಾಗ, ಅವನು ಜ್ಯಾಕ್ಸನ್ ಹೈಟ್ಸ್ ಗೆ ಹೋದರೆ ತನ್ನ ಹಳೆಯ ಕಾರನ್ನು ಲಾಕ್ ಕೂಡ ಮಾಡ್ತಿರಲಿಲ್ಲವಂತೆ. ಲಾಕ್ ಮುರಿದರೆ, ಅದಕ್ಕೆ ಬೇರೆ ಖರ್ಚು. ಮತ್ತೊಂದು ಗಾಳಿಸುದ್ದಿ - ಒಂದು ಫ್ಯಾಮಿಲಿ ಇಂಡಿಯಾಗೆ ಹೋಗೊಕ್ಕೆ JFK ಏರ್ಪೋರ್ಟ್ ಗೆ ಹೋಗಬೇಕಿತ್ತು. ಕೊನೆ ಕ್ಷಣ ಶಾಪಿಂಗ್ ಮಾಡಲು ಜ್ಯಾಕ್ಸನ್ ಹೈಟ್ಸ್ ಗೆ ಹೋಗಿದ್ದಾರೆ. ಬಂದು ನೋಡಿದರೆ ಕಾರಿನಲ್ಲಿದ್ದ ಎಲ್ಲಾ ಸೂಟ್ ಕೇಸ್ ಗಳು ಮಾಯವಾಗಿದ್ದವಂತೆ.

ಈಗ ಹೇಗಿದೆಯೋ ಗೊತ್ತಿಲ್ಲ, ಆದ್ರೆ ನೀವೇನಾದ್ರು ಜ್ಯಾಕ್ಸನ್ ಹೈಟ್ಸ್ ಗೆ ಹೋದರೆ, ಸ್ವಲ್ಪ ಹುಷಾರಾಗಿರಿ!!



## ನಾವು ನೋಡಿದ ಸಿನೆಮಾ








Copyright © KCO – Brindavana

## *ಸಾಹಿತ್ಯ ಭಂಡಾರ : ಲೇಖನ ಆಹ್ವಾನ*

ಆತ್ಮೀಯ ಬೃಂದಾವನ ಸಾಹಿತ್ಯ ಬಳಗಕ್ಕೆ ನಮಸ್ಕಾರಗಳು,

ಬೃಂದಾವನ ಕನ್ನಡ ಕೂಟದ ಪರವಾಗಿ ನಿಮಗೆ ಹಾರ್ದಿಕ ಶುಭಾಶಯಗಳು. ಅಭಿಮಾನಿ ತಂಡದ ಎಲ್ಲಾ ಕಾರ್ಯ ಚಟುವಟಿಕೆಗಳ ಹಿಂದೆ ನೀವಿದ್ದೀರಿ, ಅದಕ್ಕಾಗಿ ನಾವು ಅತ್ಯಂತ ಆಭಾರಿಯಾಗಿದ್ದೇವೆ. ಈ ಸಲದ ಸಾಹಿತ್ಯ ಬೃಂದಾವನ ಕಾರ್ಯಕ್ರಮದ ಅಂಗವಾಗಿ ಒಂದು ವಿಶೇಷ ಪುಸ್ತಕವನ್ನು ಹೊರತರುವ ಯೋಜನೆಯನ್ನು ನಾವು ಹಮ್ಮಿಕೊಂಡಿದ್ದೇವೆ. ಎಂದಿನಂತೆ ನಿಮ್ಮ ಬೆಂಬಲವೇ ನಮಗೆ ಸ್ಫೂರ್ತಿ.

***"ಬದುಕು ಜಟಕಾಬಂಡಿ ವಿಧಿಯದರ ಸಾಹೇಬ.."*** ಕವಿ, ದಾರ್ಶನಿಕ ಡಿ ವಿ ಗುಂಡಪ್ಪನವರ ಈ ಕಗ್ಗ ಎಷ್ಟೊಂದು ಅರ್ಥಗರ್ಭಿತ..ಬದುಕಿನ ಅರ್ಥವನ್ನು ಕೆಲವೇ ಸಾಲುಗಳಲ್ಲಿ ಹಿಡಿದಿಟ್ಟಿದೆಯಲ್ಲವೇ ? ಈ ಜಟಕಾ ಬಂಡಿಯ ಪಯಣ ದಾರಿಯುದ್ದಕ್ಕೂ ಬಗೆ ಬಗೆಯ ಅನುಭವಗಳ ಸರಮಾಲೆ ಮನುಷ್ಯನನ್ನು ಹಂತ ಹಂತವಾಗಿ ರೂಪಿಸುತ್ತಾ ಸಾಗುತ್ತದೆ. ಈ ಹಲವು ವಿಶೇಷ ಅನುಭವಗಳನ್ನು ಒಂದೆಡೆ ಸಂಕಲಿಸುವ ಪ್ರಯತ್ನವೇ ನಮ್ಮ ಸಾಹಿತ್ಯ ಬೃಂದಾವನದ ಚೊಚ್ಚಲ ಪುಸ್ತಕ– **"ಬದುಕು ಜಟಕಾ ಬಂಡಿ"**.

ನ್ಯೂಜೆರ್ಸಿ ಬೃಂದಾವನ ಕನ್ನಡ ಕೂಟದ ೧೩ನೇ ವಾರ್ಷಿಕ ಸಂದರ್ಭದಲ್ಲಿ ಅಭಿಮಾನಿ ತಂಡ, ಕನ್ನಡ ಭಾಷೆ, ಸಂಸ್ಕೃತಿಯನ್ನು ಎತ್ತಿ ಹಿಡಿಯುವುದರಲ್ಲಿ ಮತ್ತೊಂದು ಮಜಲನ್ನೇರುತ್ತಿದೆ. ಇದೇ ದಿಕ್ಕಿನಲ್ಲಿ ನಮ್ಮ ಮೂರನೆಯ ಸಾಹಿತ್ಯ ಬೃಂದಾವನ ಕಾರ್ಯಕ್ರಮವನ್ನು ಅತ್ಯಂತ ಉತ್ಸಾಹದಿಂದ ರೂಪಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ಒಂದು ಉತ್ತಮ ಸಾಹಿತ್ಯ ಕೃತಿಯನ್ನು ಹೊರತರುವ ಆಸೆ ನಮ್ಮದು. ಅದರ ರೂಪವೇ, ನಾವು ಹಮ್ಮಿಕೊಂಡಿರುವ ಬದುಕು ಜಟಕಾ ಬಂಡಿ... ಕೃತಿ, ನಮ್ಮೆಲ್ಲರ ಹತ್ತು ಹಲವು ಅನುಭವಗಳ ಸರಮಾಲೆಯಾಗಿ ರೂಪುಗೊಳ್ಳಲಿದೆ.

ಈ ಪುಸ್ತಕವನ್ನು ಯಶಸ್ವಿಯಾಗಿ ರೂಪಿಸಲು ಲೇಖನಗಳು ಈ ಕೆಳಗಿನ ಚೌಕಟ್ಟಿನಲ್ಲಿದ್ದರೆ ಸಹಾಯವಾಗುತ್ತದೆ.

೧. "ಬದುಕು ಜಟಕಾಬಂಡಿ..." ಜೀವನದ ವಿಶೇಷ ಅನುಭವಗಳನ್ನು ಹಿಡಿದಿಡುವ ಪ್ರಯತ್ನ. ಈ ಅನುಭವಗಳು -ಇತ್ತೀಚಿನದ್ದಿರಬಹುದು, ಹಿಂದಿನದಿರಬಹುದು. ಈ ಅನುಭವ, ಸ್ವಂತದ್ದಾಗಿರಬಹುದು, ಇತರರದಿರಬಹುದು, ಸಿಹಿಯಿರಬಹುದು, ಕಹಿಯಾಗಿರಬಹುದು, ತಮ್ಮ ಪ್ರೊಫೆಷನಲ್ ಅಥವಾ ಸಾಮಾಜಿಕ ಅನುಭವವಾಗಿರಬಹುದು. ಒಟ್ಟಾರೆ ಅದೊಂದು ವಿಶೇಷದ್ದಾಗಿರಲಿ.. ಅದರಲ್ಲೊಂದು ಸಂದೇಶ, ಕಲಿಕೆ ಇದ್ದರೆ ಇನ್ನೇನು ಬೇಕು ?
೨. ಈ ಅನುಭವವನ್ನು ಹಿಡಿದಿಡುವ ಮಾಧ್ಯಮ ಯಾವುದಾದರೂ ಸರಿ. ಕಥೆ, ಕವನ, ಪ್ರಬಂಧ, ನಾಟಕ..ಆಯ್ಕೆ ನಿಮ್ಮದು. ಲೇಖನಗಳು ಈ ಹಿಂದೆ ಎಲ್ಲಿಯೂ ಪ್ರಕಟವಾಗಿರದಿರಲಿ.
೩. ಲೇಖನ ಒಟ್ಟು ೨೦೦೦ ಶಬ್ದಗಳಿಗೆ ಮೀರದಿರಲಿ.
೪. ಲೇಖನ ಕಳುಹಿಸಲು ಕೊನೆಯ ದಿನಾಂಕ: ಆಗಸ್ಟ್ ೧೦, ೨೦೧೭
೫. ಎಲ್ಲ ಲೇಖನಗಳನ್ನು ಈ ಸಂಕಲನದಲ್ಲಿ ಸೇರಿಸುವ ಪ್ರಯತ್ನ ನಮ್ಮದು. ಆದಾಗ್ಯೂ ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ.

ಈ ಪುಸ್ತಕ ಸುಂದರವಾಗಿ ಮೂಡಿಬರಲು ತಮ್ಮ ಎಲ್ಲ ಸಲಹೆಗಳಿಗೆ ಸ್ವಾಗತವಿದೆ. ಹೊರನಾಡ ಕನ್ನಡಿಗರ ಕನ್ನಡ ಸೇವೆಗೆ ಈ ಪ್ರಯತ್ನವೊಂದು ಅಳಿಲು ಸೇವೆಯಾಗಲಿ ಎನ್ನುವ ಆಸೆಯೊಂದಿಗೆ ನಿಮ್ಮ ಲೇಖನಗಳಿಗಾಗಿ ಇದಿರು ನೋಡುತ್ತೇವೆ.

ವಂದನೆಗಳೊಂದಿಗೆ
ಸಂಪಾದಕ ವರ್ಗ (ಸಾಹಿತ್ಯ ಬೃಂದಾವನ )
-ಸತ್ಯ
-ಡಾ. ಅಶೋಕ್ ಕಟ್ಟಿಮನಿ
-ಕಾವ್ಯ ಕಡಮೆ
-ಪ್ರಶಾಂತ್ ಜೋಶಿ
-ರುದ್ರ ಕುಮಾರ್
-ಸತ್ಯ ಪ್ರಸಾದ್

## ಕವನ

### *ಅಳಲು*



ದೀಪಕ್ ನಾಯ್ಕ ಕ್ಷತ್ರಿಯ

ಹೆಣ ಬಿದ್ದಾಗಾ ಕುಕ್ಕಿ ತಿನ್ನುವ
ರಣಹದ್ದುಗಳು ..
ಜೀವ ಹೋದಾಗ ಅಳುವ
ಕಣ್ಣುಗಳು...
ವ್ಯತ್ಯಾಸವೇನಿಲ್ಲಾ
ತಿಂದು ಅಳುವ ಸಂಸ್ಕೃತಿ ಅಷ್ಟೇ ...

ಲಜ್ಜೆಗೆಟ್ಟ ಮನಸುಗಳ
ರಾಜಕೀಯ ಧಾಳಕ್ಕೆ ಉರುಳಿದ
ಹೆಣ ಬಂದು ಮಾತನಾಡಬೇಕೆ
ಆ ಮೌನದ ಉಸಿರಲ್ಲಿ
ಇನ್ನೆಲ್ಲಿದೆ ತ್ರಾಣ
ಅಳಿದುಳಿದ ನಿರೀಕ್ಷೆಗಳು
ಹುಸಿಯಾದವು ಕರುಣೆ
ಇಲ್ಲದ ಕಣ್ಣುಗಳ ನೋಡಿ

ಅಧಿಕಾರದ ಲಾಲಸೆಗೆ
ಬೇಕಿರುವುದು ಬಡ ಜೀವಗಳು
ಸುಲಭಕ್ಕೆ ಸಿಗುವ
ಬಿಸಿ ರಕ್ತದ ತರುಣರು

ನಾವೆಲ್ಲಾ ಒಂದು ಎಂದರೆ
ಅದು ದಬ್ಬಾಳಿಕೆ
ನೀವೇ ಮೇಲೆಂದರೆ
ಅದು ಜಾತ್ಯಾತೀತತೆ
ಒಲೈಕೆ ಮೀಸಲಾತಿ ನಡುವೆ
ಮೂಡಿದೆ ಒಂದು ದೊಡ್ಡ
ಕಂದಕ
ಎಲೆ ಉದುರಿಸಿದ ಜಾತಿವಾದಕ್ಕೆ
ಪುನಃ ನೀರು ಹೊಯ್ಯುವ
ಪುಡಾರಿ

ಪ್ರಫುಲ್ಲ ಮನಸುಗಳ
ಕೆಡಿಸುವವರು,
ತಮ್ಮ ಚದುರಂಗದಾಟಕ್ಕೆ
ಬಳಸುವವರೂ
ಆಟ ಮುಗಿದ ಮೇಲೆ ಕಾಯಿ
ಮಸಣ ಸೇರುವುದು
ಜೀವ ಹೋದ ದೇಹದಂತೆ
ಎಲ್ಲಾ ನೋಡುತ್ತಾ ಕುಳಿತ
ಜನ ಮೂಕರಾಗುವರು
ನಾಟಕ ನೋಡಿ ಮರುಳಾದ
ಪ್ರೇಕ್ಷಕರಂತೆ...

ಇನ್ನಾದರೂ ಇದಕ್ಕೆ
ಕೊನೆಯಿರಲಿ,
ಅರಿತ ನೇತಾರ ಮುಂದೆ ಬರಲಿ
ಕೆಸರೆರಚಾಟ ನಿಲ್ಲಲಿ
ಭ್ರಷ್ಟಾಚಾರ ಕೊನೆಗಾಣಲಿ
ದೇಶಭಕ್ತಿ ಪ್ರತಿ ಮನಸಲ್ಲೂ
ಮೂಡಲಿ
ಅಸಮಾನತೆ ಭೂತ ತಲೆಯಿಂದ
ಹೋಗಲಿ
ಎಲ್ಲೆಡೆ ಶಾಂತಿ ನೆಲೆಸಲಿ.......
ಜೈ ಹಿಂದ


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಓದುಗರ ಓಲೆಗಳು

**ರಾಗಿ ನಾಗಮಂಗಲ ನಾಗಮಂಗಲ**
ಖುಷಿಯಾಗತ್ತೆ ನೂಜೇರ್ಸಿಯಲ್ಲಿ ಕನ್ನಡದ ಘಮಲು ಸಂಪಾದಕರಿಗೆ ನಂದೊಂದ್ ನಮನ
ನಿಮಗೆ ಅಭಿನಂದನೆಗಳು ,ತುಂಬಾ ದಿನಗಳ ನಂತ್ರ ಅಕ್ಷರಗಳ ರುಚಿ ಹಿಡಿಸಿದ್ದು ನಿಮ್ಮದು ಮತ್ತು ಸಿಂಚನ ಅವರ ಬರಹಗಳು ಬರೀರಿ ಹೀಗೆ ನಿರಂತರವಾಗಿ ಎಲ್ಲೆಡೆ ಅದರಲಿ ಕನ್ನಡದ ಕಂಪು ,

ಈ ಮೊದಲೆ ಪುತಿನ ಅವರ ಅಹಲ್ಯೆ ಓದಿದ್ದೆ ಹಿನ್ನಲೆ ಭೇದವಿಲ್ಲದೆ ಪ್ರಕೃತಿಯೊಂದಿಗೆ ಪಾತ್ರಗಳು ಪಾತ್ರಗಳೊಂದಿಗೆ ಪ್ರಕೃತಿಯೂ ಸಮತಾನವಾಗಿ ಎದೆಮಿಡಿಯುವುದನ್ನು ನೋಡಬಹುದು,ಚೆನ್ನಾಗ್ ಬರ್ದಿದಿರ ಅವಲೋಕಿಸಿ :) ರಾಮಾಯಣದ ಕಥಾಪಾತ್ರವನ್ನು ಆಯ್ಕೆ ಮಾಡಿಕೊಂಡದ್ದು ಅಹಲ್ಯೆ ಮಾಡಿದ್ದು ಗೌತಮರಿಗೆ ತಪ್ಪಾಗಿದ್ದು,ರಾಮ ಸೀತೆ ಜೆತೆಗೇರುಸಿದ್ದು ಎರಡು ಸದಾ ಕಾಡತ್ತೆ

Yesterday at 2:42 PM · Edited · Like · Reply · 1

**Shubhashree Shrivatsa**
'ಧನ್ಯವಾದಗಳು' ಈ ಶಬ್ಧ ಬಹುಶಃ ಸಣ್ಣದಾಗಬಹುದು..ಇವತ್ತಿನ ಮುಂಜಾನೆಯನ್ನು ಸುಂದರವಾಗಿ ಮಾಡಿದ್ದಿರಿ ನಿಮ್ಮ ಅಭಿನಂದನೆಯಿಂದ ಎಂದೆನ್ನಬಹುದು :)

ಮಮತಾ ಅವರ ಆ ಹುಡುಗಿ ಕುತೂಹಲಕಾರಿಯಾಗಿತ್ತು. ನಾನು ಹುಡುಗರೆಲ್ಲಾ ಮನೆಗೆ ಹಿಂತಿರುಗುವ ಹೊತ್ತಿಗೆ ಕಳ್ಳತನವಾಗಿತ್ತೇನೋ ಎಂದುಕೊಂಡಿದ್ದೆ.

- ಬಿಂದುಮಾಧವಿ

**Mallik Prasad**
೧೦ ನೇ ಬೃಂದಾವನ ವಾಣಿ ಅಂಕಣಗಳು, ಚಿತ್ರಗಳು ತುಂಬಾ ಚೆನ್ನಾಗಿ ಮೂಡಿ ಬಂದಿದೆ.. Brindavana ಸಂಪಾದಕ ವರ್ಗಕ್ಕೆ ನನ್ನ ಅಭಿನಂದನೆಗಳು !

**Shubhashree Shrivatsa**
ನನ್ನ ಕಥೆ 'ಅಹಲ್ಯೆಯೆಂಬ ಶಬರಿ'ಯನ್ನು ಪ್ರಕಟಿಸಿ ಪ್ರೋತ್ಸಾಹಿಸಿದ್ದಕ್ಕೆ ಧನ್ಯವಾದಗಳು 🙂

**Mahesh Seeri**
Vani magazine came very good. Great job by Editorial team and writers..

**Sandhya Mallik**
Enjoyed reading Brindavana Vani...wow..we have so many wonderful writers in NJ...kudos to the entire team 👏👏👏
Congratulations on your 10th editorial...mile stone indeed





ಉಷ ಬಸ್ರೂರ್





## ಸದಸ್ಯತ್ವ ಮಾಹಿತಿ

ಬೃಂದಾವನ ಕನ್ನಡ ಕೂಟ ,ಕನ್ನಡ ಮತ್ತು ಕನ್ನಡಿಗರ ಪರವಾದ ಕಾರ್ಯಕ್ರಮಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ನ್ಯೂ ಜೆರ್ಸಿ ಮತ್ತು ಸುತ್ತ ಮುತ್ತ ಇರುವ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಎಂಬ ವಿನಂತಿ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಬೃಂದಾವನದ "ಸದಸ್ಯತ್ವ". ವಾರ್ಷಿಕ , ದ್ವೈ ವಾರ್ಷಿಕ , ಅಜೀವ ಅಥವಾ ವಿದ್ಯಾರ್ಥಿ ಸದಸ್ಯತ್ವಗಳಲ್ಲಿ ,ನಿಮಗೆ ಸೂಕ್ತವಾದ ಸದಸ್ಯತ್ವವನ್ನು ಆಯ್ಕೆ ಮಾಡಿ. ಈಗ ಸದಸ್ಯತ್ವ ಪರಿಪೂರ್ಣ ಇಲೆಕ್ಟ್ರಾನಿಕ್ ರೂಪದಲ್ಲಿ ಆನ್ಲೈನ್ ದೊರೆಯುತ್ತದೆ. www.brindavana.orgಗೆ ಹೋಗಿ ನಿಮ್ಮ ವಿವರಗಳನ್ನು ನೀಡಿ ಸೂಕ್ತವಾದ ಸದಸ್ಯತ್ವ ಪಡೆಯಿರಿ. ಕ್ಷಣಾರ್ಧದಲ್ಲಿ ನಿಮಗೆ e-mail ಮುಖೇನ ಸದಸ್ಯತ್ವದ ವಿವರ ಬಂದು ಸೇರುವುದು. ನಿಮ್ಮ ಈ ಬೃಂದಾವನ, Karnataka Cultural Organization - Brindavana (KCOB) NJ, USA. 501(3)(c)ಪಡೆದ ಚಾರಿಟಿ ಸಂಸ್ಥೆ. ಇದಕ್ಕೆ ನಿಮ್ಮ ಕಾಣಿಕೆ ಪರಿಪೂರ್ಣ ಟ್ಯಾಕ್ಸ್ ರಹಿತ.
ಏನಾದರು ಪ್ರಶ್ನೆ ಇದ್ದಲ್ಲಿ president@brindavana.orgಗೆ ಇ-ಮೇಲ್ ಮಾಡಿ.
ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ಎಲ್ಲರೂ ಸೇರಿ ಕನ್ನಡ ತಾಯಿ ಭುವನೇಶ್ವರಿಯನ್ನು ಆರಾಧಿಸಿ, ಕನ್ನಡದ ಕಂಪನ್ನು ಹರಡೋಣ.

### ಸೂಚನೆ:

ನ್ಯೂಜೆರ್ಸಿಯ ಮತ್ತು ಸಮಸ್ತ ಕನ್ನಡದ ಸ್ನೇಹಿತರೆಲ್ಲರೂ “ಬೃಂದಾವನ ವಾಣಿ”ಯಲ್ಲಿ ಭಾಗಿಗಳಾಗಬೇಕೆಂಬುದು ನಮ್ಮ ಆಶಯ. ವಾಣಿಯಲ್ಲಿ ಮೂಡಿಬರುವ ಅಂಕಣಗಳು-ಸಾಹಿತ್ಯವಾಣಿ,ವನಿತಾವಾಣಿ, ಪುಟಾಣಿ-ಪ್ರಪಂಚ, ಬಾಲಪ್ರತಿಭೆ, ಕ್ರೀಡ, ಅಮೆರಿಕಾ ನಾ ಕಂಡಂತೆ, ಯುವ ವಾಣಿ, ಸುತ್ತ-ಮುತ್ತ, ಹಾಗೇ ಸುಮ್ಮನೆ.. ಈ ಅಂಕಣಗಳಿಗೆ ಲೇಖನ,ಕವನ,ಕಥೆ, ಚುಟುಕುಗಳನ್ನು ಬರೆದು ಕಳಿಸಿ. ಅಡುಗೆ, ಮನೆ ಮದ್ದು, ಅಲಂಕಾರ, ಸಂಪ್ರದಾಯಗಳ ಮಾಹಿತಿ ನೀಡುವ ಕಿರುಲೇಖನಗಳನ್ನು, ಮಕ್ಕಳು ಬರೆದ ವರ್ಣಚಿತ್ರಗಳನ್ನು ಕಳುಹಿಸಬಹುದು. ಮಕ್ಕಳಿಗಾಗಿ ನೀತಿ ಕಥೆಗಳನ್ನು ಬರೆದು ಕಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ಅಮೆರಿಕಾ ನಾ ಕಂಡಂತೆ** - ಇದು ಜೀವನಾನುಭವಗಳ ಅಂಕಣ. ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ. ನೀವು ಕ್ಲಿಕ್ಕಿಸಿದ ಸುಂದರ ಛಾಯಾಚಿತ್ರಗಳನ್ನು ಕಳುಹಿಸಬಹುದು.
ನಿಮ್ಮ ಅನಿಸಿಕೆ,ಸಲಹೆ,ಸೂಚನೆಗಳಿಗೆ ತಪ್ಪದೇ ತಿಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ವಿಶೇಷ ಸೂಚನೆ** : ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. ಲೇಖನಗಳು ಸಂಕ್ಷಿಪ್ತವಾಗಿರಲಿ. ಕಳುಹಿಸಿದ ಮಾಹಿತಿ, ಲೇಖನ ಅಸಂಪೂರ್ಣ ಅಥವಾ ಅನುಚಿತವೆನಿಸಿದರೆ ಅದನ್ನು ಪ್ರಕಟಿಸಲಾಗುವುದಿಲ್ಲ.ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ. 'ಬೃಂದಾವನ ವಾಣಿ'ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು, ಮಾಹಿತಿಗಳಿಗೆಲ್ಲ ಲೇಖಕರೇ ಜವಾಬ್ದಾರರು.ಅಂಕಣಗಳಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ ,'ಬೃಂದಾವನ ವಾಣಿ' ಮತ್ತು ಬೃಂದಾವನ' ಕನ್ನಡ ಕೂಟ ಜವಾಬ್ದಾರರಲ್ಲ.

'ಬೃಂದಾವನ ವಾಣಿ' ಮತ್ತು 'ಬೃಂದಾವನ' ಕನ್ನಡ ಕೂಟ ಯಾವುದೇ ಒಂದು ರಾಜಕೀಯ ಪಕ್ಷವನ್ನು , ಧರ್ಮವನ್ನು ಅಥವಾ ಪಂಗಡವನ್ನು ಪ್ರತಿನಿಧಿಸುವುದಿಲ್ಲ . ನಮ್ಮ ಧ್ಯೇಯ ಕರ್ನಾಟಕ ರಾಜ್ಯ, ಕನ್ನಡ ಭಾಷೆ , ಸಂಸ್ಕೃತಿ ಹಾಗು ಕನ್ನಡಿಗರ ಅಭ್ಯುಧಯ ಮಾತ್ರ.


Copyright © KCO – Brindavana